ವಿಜಯಪುರ | ಸಂಪುಟ 04 | ಸಂಚಿಕೆ 213 | ಪುಟ 08 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶುಕ್ರವಾರ, ಅಕ್ಟೋಬರ್ 16, 2026

"ರಾಜಕೀಯದಲ್ಲಿ ಸೇಡು ತೀರಿಸಿಕೊಳ್ಳಲು ಹಲವು ದಿಕ್ಕುಗಳು ಇವೆ. ಆದರೆ 15 ವರ್ಷಗಳ ಹಿಂದಿನ ಘಟನೆ ಇಟ್ಟುಕೊಂಡು ಸಿದ್ದರಾಮಯ್ಯ ರ ವರ್ಚಸ್ಸಿಗೆ ಧಕ್ಕೆ ತರುವ ಪ್ರಯತ್ನ ಸರಿಯಲ್ಲ. ತನಿಖೆಯ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಆದರೆ ಈ ರೀತಿಯ ಕೆಸರೆರೆಚಾಟ ಸರಿಯಲ್ಲ. ರಾಜಕೀಯ ತೆವಲಿಗೆ ಹೀಗೆಲ್ಲಾ ಮಾಡುತ್ತಿದ್ದಾರೆ."



■ ಬಿ.ಕೆ. ಹರಿಪ್ರಸಾದ್
ಕೆಪಿಸಿಸಿ ಅಧ್ಯಕ್ಷರು

## ಕಬ್ಬಿಗೆ ಬೆಂಬಲ ಬೆಲೆ, ಎಕರೆಗೆ ರೂ. 50 ಸಾವಿರ ಪರಿಹಾರಕ್ಕೆ ಆಗ್ರಹ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಾಲ್ಲೂಕಿನ ನಾದ ಕೆಡಿ ಗ್ರಾಮದಲ್ಲಿ ರೈತರು ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕಬ್ಬಿಗೆ ಸೂಕ್ತ ಬೆಂಬಲ ಬೆಲೆ ನೀಡಬೇಕು. ಭೀಕರ ಬರಗಾಲದಿಂದ ಸಂಕಷ್ಟಕ್ಕೀಡಾದ ರೈತರಿಗೆ ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ತುರ್ತು ಪರಿಹಾರ ಘೋಷಿಸಬೇಕು. ನಾದ ಕೆಡಿ ಸುತ್ತಮುತ್ತಲಿನ 16 ಗ್ರಾಮಗಳಿಗೆ ಕಾಲುವೆ ಹಾಗೂ ಹಳ್ಳಗಳ ಮೂಲಕ ನೀರು ಹರಿಸಬೇಕು. ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು. ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಮಳೆಯ ಕೊರತೆ, ಬೆಳೆಗಳಿಗೆ ಸೂಕ್ತ ಬೆಲೆ ಸಿಗದಿರುವುದು ಹಾಗೂ ನೀರಾವರಿ ಸೌಲಭ್ಯಗಳ ಅಭಾವದಿಂದ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಕೃಷಿ ಚಟುವಟಿಕೆಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದಿರುವುದು ರೈತರ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಿದೆ. ಹೀಗಾಗಿ ಸರ್ಕಾರ ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರೈತರ ಹಕ್ಕುಗಳ ರಕ್ಷಣೆಗಾಗಿ ಎಲ್ಲರೂ ಜಾತಿ, ಪಕ್ಷ ಭೇದ ಮರೆತು ಒಗ್ಗಟ್ಟಿನಿಂದ ಹೋರಾಡಬೇಕು. ರೈತರ ಒಗ್ಗಟ್ಟೇ ಹೋರಾಟದ ಶಕ್ತಿ ಎಂದು ಪ್ರತಿಭಟನಾಕಾರರು ಹೇಳಿದರು.

ಸಾನ್ನಿಧ್ಯವನ್ನು ನಾದ ಶಿವಾನಂದ ಶಿವಾಚಾರ್ಯರು ವಹಿಸಿದ್ದರು.

ಪ್ರತಿಭಟನೆಯಲ್ಲಿ ಬಾಳು ಮುಳಜಿ, ಎಸ್.ಟಿ. ಪಾಟೀಲ, ಬಿ.ಡಿ. ಪಾಟೀಲ (ಜೆಡಿಎಸ್ ಮುಖಂಡರು), ಶ್ರೀಶೈಲ ಮದರಿ, ರವಿಕುಮಾರ ಕೆರೂಟಗಿ, ಯಶವಂತ ತೆಲಗ, ಶರಣಗೌಡ ಬಂಡಿ, ಎಂ.ಎಸ್. ಮುಲ್ಲಾ, ಅಜೀಜ್ ದೇಸಾಯಿ, ನನಗೌಡ ಪಾಟೀಲ, ಕಲ್ಯಾಣಿ ಹಿಟ್ನಳ್ಳಿ, ಶಿವಾನಂದ ರಾವೂರ, ಸುರೇಶ ಕುಲಕರ್ಣಿ, ಅಂಬಣ್ಣ ಕವಟಗಿ, ಉಮೇಶ ಬಡಿಗೇರ, ವಿಠ್ಠಲ ಬಿರಾದಾರ, ಪೈಗಂಬರ್ ದೇಸಾಯಿ, ಬಸಣ್ಣ ಸೌವಕರ, ಸಿದ್ದು ತಳವಾರ, ರಫೀಕ್ ವಾಲಿಕಾರ್, ಮಹೇಶ ಹೂಗಾರ, ದುಂಡುಗೌಡ ಬಿರಾದಾರ, ಸಂಗಣ್ಣ ದೇವರಮನಿ, ಪ್ರಶಾಂತ ಲಾಸಂಗಿ, ಬಸು ಖಿಷ್ಕಿ, ಈಶ್ವರಗೌಡ ಬಗಲಿ, ಮಲ್ಲಪ್ಪ ಮಾಸ್ತಾರ, ಪಾಸೋಡಿ ಸಂಗೋಗಿ, ಸುಭಾಷ ನಾವಿ, ಪ್ರಭುಗೌಡ ಪಾಟೀಲ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಹಾಗೂ ಸುಮಾರು 1,000 ರೈತರು ಪಾಲ್ಗೊಂಡಿದ್ದರು.

**ರೈತರ ವಿವಿಧ ಬೇಡಿಕೆ ಈಡೇರಿಕೆಗೆ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ**

## ಅಗತ್ಯ ಬಿದ್ದರೆ ಕಬ್ಬು ಬೆಳೆಗಾರರ ಪರ ಹೋರಾಟಕ್ಕೂ ಸಿದ್ಧ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ರಿಕವರಿಯಲ್ಲಿ, ತೂಕದಲ್ಲಿ, ಕಟಾವಿನಲ್ಲಿ ಆಗುತ್ತಿರುವ ವ್ಯತ್ಯಾಸಗಳ ಮೇಲೆ ರೈತರು ಬೆಳಕು ಚೆಲ್ಲಿದ್ದಾರೆ, ಈ ಎಲ್ಲ ಸಮಸ್ಯೆಗಳನ್ನು ಬಗೆ ಹರಿಸುವ ಕೆಲಸ ಮಾಡಬೇಕಾದ ರಾಜ್ಯ ಸರ್ಕಾರ ಏನು ಮಾಡುತ್ತಿದೆ, ಹೋರಾಟದ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದನ್ನು ಬಿಡಿ, ಕಬ್ಬು ಬೆಳೆಗಾರರ ಬೇಡಿಕೆಗಳಲ್ಲಿ ಶೇ.70 ರಷ್ಟು ಬೇಡಿಕೆಗಳನ್ನು ರಾಜ್ಯ ಸರ್ಕಾರ ಈಡೇರಿಸಬೇಕಿದೆ, ಈ ಕಡೆ ಗಮನ ಹರಿಸಿ, ತೂಕ, ರಿಕವರಿಯಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಘೋಷಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ರೈತರು ಈ ಮೂಲಭೂತ ಸಮಸ್ಯೆಗಳ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ, ಈ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕಾಗಿರುವುದು ರಾಜ್ಯ ಸರ್ಕಾರ, ಆದರೆ ರಾಜ್ಯ ಸರ್ಕಾರ ಕೇವಲ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಮಾತ್ರ ಮಾಡುತ್ತಿದೆ ಎಂದರು.

ಎಂಎಸ್‌ಪಿ ಪರಿಷ್ಕರಣೆಗೆ ಸಂಬಂಧಿಸಿದಂತೆ ರಮೇಶ ಚಾಂದ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಸಮಿತಿ ರಚನೆ ಮಾಡಿದೆ, ಈ ಸಮಿತಿಗೆ ಕಬ್ಬು ಬೆಳೆಗಾರರು ಸಹಕಾರ ನೀಡಬೇಕು, ಕಬ್ಬು ಬೆಳೆಗಾರರ ಹೋರಾಟ ನ್ಯಾಯಯುತವಾಗಿದ್ದು, ಈ 9 ಹೋರಾಟಕ್ಕೆ ಬಿಜೆಪಿ ಸಂಪೂರ್ಣ ಬೆಂಬಲ ನೀಡಲಿದೆ, ಸಾಧ್ಯವಾದರೆ ಅವರ ಹೋರಾಟಕ್ಕೂ ಕೈ ಜೋಡಿಸಲಿದೆ ಎಂದು

ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಸ್ಪಂದಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ದಿಟ್ಟ ಹೆಜ್ಜೆ ಇರಿಸಲಿದೆ, ಕಬ್ಬು ಬೆಳೆಗಾರರ ಸಮ್ಮುಖದಲ್ಲಿ ನಾಲ್ಕೈದು ಗಂಟೆಗಳ ಕಾಲ ಕೇಂದ್ರ ಸರ್ಕಾರ ಸುದೀರ್ಘ ಸಭೆ ನಡೆಸಿದೆ, ರಮೇಶ ಚಾಂದ್ ಅವರ ನೇತೃತ್ವದಲ್ಲಿ ಸಮಿತಿ ರಚಿಸುವ ಮಹತ್ವದ ನಿರ್ಧಾರ ಸಹ ತೆಗೆದುಕೊಂಡಿದೆ, ಈ ಸಮಿತಿ ಎಂಎಸ್‌ಪಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಈ ಸಮಿತಿ ಅಧ್ಯಯನ ಮಾಡುತ್ತಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್. ಪಾಟೀಲನಡಹಳ್ಳಿ ಕಿಡಿ**

## ಅಂಗನವಾಡಿ ಕಂ–ಕ್ರಷ್ ಕೇಂದ್ರಗಳ ಕಾರ್ಯಕರ್ತೆ–ಸಹಾಯಕಿ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮುದ್ದೇಬಿಹಾಳ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ 2026–27ನೇ ಸಾಲಿಗೆ ಅಂಗನವಾಡಿ–ಕಂ–ಕ್ರಷ್ ಕೇಂದ್ರಗಳಲ್ಲಿನ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಂಗನವಾಡಿ–ಕಂ–ಕ್ರಷ್ ಕೇಂದ್ರಗಳ 06 ಕಾರ್ಯಕರ್ತೆಯರು ಹಾಗೂ 06 ಸಹಾಯಕಿಯರ ಹುದ್ದೆಗಾಗಿ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಈ ಕುರಿತ ಹೆಚ್ಚಿನ ಮಾಹಿತಿಗಾಗಿ ಮುದ್ದೇಬಿಹಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಸ್ಟಿಂಗ್ ಆಪರೇಷನ್: ಸಾಕ್ಷ್ಯಾಧಾರ ಮೇಲೆ ಮುಂದಿನ ಕ್ರಮ!

### ಮುಂದಿನ ನಿರ್ಧಾರ ಸಿಎಂ ಡಿಕೆ ಶಿವಕುಮಾರ್‘ಗೆ ಬಿಟ್ಟ ಸಚಿವ ಸಂಪುಟ । ಪ್ರತ್ಯೇಕ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸದಿರಲು ಸರ್ಕಾರ ನಿರ್ಧಾರ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಪ್ರಕರಣದ ಕುರಿತು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಗಂಭೀರ ಚರ್ಚೆ ನಡೆಯಿತು.

ಪ್ರಕರಣದ ಮುಂದಿನ ಕ್ರಮದ ನಿರ್ಧಾರವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಿಡಲಾಗಿದ್ದು, ಸದ್ಯಕ್ಕೆ ಪ್ರತ್ಯೇಕ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸದಿರಲು ಸರ್ಕಾರ ನಿರ್ಧರಿಸಿದೆ.



ಸಭೆಯ ಬಳಿಕ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ಈಗಾಗಲೇ ನಡೆಯುತ್ತಿರುವ ತನಿಖೆ ಮುಂದುವರಿಯಲಿದ್ದು, ಸಂಗ್ರಹಿಸಿರುವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

"ತನಿಖೆ ಮುಕ್ತವಾಗಿ ಮತ್ತು ಪಾರದರ್ಶಕವಾಗಿ ನಡೆಯಲಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಅಗತ್ಯ ಬಿದ್ದರೆ ಪ್ರಕರಣವನ್ನು ಸೂಕ್ತ ತನಿಖಾ ಸಂಸ್ಥೆಗೆ ವಹಿಸಲು ಸರ್ಕಾರ ಹಿಂಜರಿಯುವುದಿಲ್ಲ" ಎಂದು ಹೇಳಿದರು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಕರಣದ ತನಿಖೆ ಕುರಿತು ಮಾಡಿರುವ ಹೇಳಿಕೆಗಳನ್ನೂ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸರ್ಕಾರ ವಿಚಾರಣೆಗೆ ಯಾರನ್ನು ಕರೆದಿದೆ, ಯಾರನ್ನು ಕರೆದಿಲ್ಲ ಎಂಬ ಮಾಹಿತಿ ಕುಮಾರಸ್ವಾಮಿ ಅವರಿಗೆ ಹೇಗೆ ತಿಳಿಯಿತು ಎಂದು ಪ್ರಶ್ನಿಸಿದ ಅವರು, ಈ ವಿವಾದದ ಮೂಲಕ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

### ಶೇ.56ರ ಮೀಸಲಾತಿ ರದ್ದತಿ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸರ್ಕಾರ

ಇದೇ ವೇಳೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಸೇರಿದಂತೆ ಒಟ್ಟು ಶೇ. 56ರ ಮೀಸಲಾತಿಯನ್ನು ರದ್ದುಗೊಳಿಸಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ (ಎಸ್‌ಎಲ್‌ಪಿ) ಸಲ್ಲಿಸಲು ಸಚಿವ ಸಂಪುಟ ನಿರ್ಧರಿಸಿದೆ.

ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಈ ನಿರ್ಧಾರವನ್ನು ಖಚಿತಪಡಿಸಿದ್ದಾರೆ. ಹೈಕೋರ್ಟ್ ಆದೇಶವು ರಾಜ್ಯದ ಸರ್ಕಾರಿ ಹುದ್ದೆಗಳು ಮತ್ತು ವಿವಿಧ ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದ್ದಾರೆ.



## ಶಾಸಕರಿಂದ ನನಗೆ ಬಹಿರಂಗವಾಗಿ ಜೀವಬೆದರಿಕೆ : ರಜಪೂತ

### ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲು ಪೊಲೀಸ್ ಮಹಾ ನಿರೀಕ್ಷಕರಿಗೆ ಪತ್ರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಾನು ಸ್ವಂತ ಬಲದಿಂದ ದುಡಿದು ಸಂಪಾದನೆ ಮಾಡಿರುವೆ, ಬಂಗಾರ ಹಾಕಿಕೊಂಡರೆ ತಪ್ಪೇನು? ನನ್ನನ್ನೇ ಉದ್ದೇಶಿಸಿ ಮಟಾಶ್ ಮಾಡುವೆ ಎಂದು ಹೇಳಿ ಶಾಸಕರು ನನಗೆ ಸಾರ್ವಜನಿಕವಾಗಿಯೇ ಧಮ್ಕಿ ಹಾಕಿದ್ದಾರೆ, ನಾನು ಅವರ ನಕಲಿ ಹಿಂದುತ್ವದ ಮುಖ ಬಯಲು ಹಾಗೂ

ಭ್ರಷ್ಟಾಚಾರ ಮುಖ ಬಯಲು ಮಾಡುತ್ತಿರುವ ಭಯದಿಂದಾಗಿಯೇ ಜೀವದ ಧಮ್ಕಿ ಹಾಕಿದ್ದಾರೆ,

ಈ ಹಿನ್ನೆಲೆಯಲ್ಲಿ ಕೂಡಲೇ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು ಎಂದು ಪೊಲೀಸ್ ಮಹಾ ನಿರೀಕ್ಷಕರಿಗೂ ಪತ್ರ ಬರೆಯುವೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಯತ್ನಾಳರು ಅತ್ಯಂತ ಕೀಳು ಪದ ಪ್ರಯೋಗ ಬಳಸಿ ನನಗೆ ಜೀವದ ಧಮ್ಕಿ ಹಾಕಿದ್ದಾರೆ, ಅವರೇ ಹೇಳುವಂತೆ ನನ್ನ ಬಳಿ ಯಾರೂ ಇಲ್ಲ, ಹೀಗಾಗಿ ಪೊಲೀಸರು ನನಗೆ ರಕ್ಷಣೆ ಕೊಡಬೇಕು, ಓಪನ್ ಆಗಿ ಜೀವದ ಧಮ್ಕಿ ಹಾಕಿದ ಯತ್ನಾಳರ ಮೇಲೆ ಸ್ವಯಂ ಪ್ರೇರಿತರಾಗಿ ದೂರು ದಾಖಲಿಸಿಕೊಳ್ಳಬೇಕು ಎಂದರು.

ಸತ್ಯ ಹರಿಶ್ಚಂದ್ರ ಎಂದು ಕರೆಯಿಸಿಕೊಳ್ಳುವ ಯತ್ನಾಳರು ಗೋಶಾಲೆ ಹೆಸರಿನಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ, ಲೀಜ್ ಪ್ರಾಪರ್ಟಿ ವಿಷಯವಾಗಿ ಗೋಶಾಲೆ ಹೆಸರಿನಲ್ಲಿ ಯತ್ನಾಳರು ಹಣ ಎತ್ತಿದರು, ಆಗ ನಾನು ವಿರೋಧಿಸಿದೆ, ನಾನು ಗೋಶಾಲೆ ಹೆಸರಿನಲ್ಲಿ ಹಣ ಪಡೆಯುತ್ತಿರುವೆ ಯಾರೂ ಏನೂ ಮಾಡಲ್ಲ ಎಂದು ದರ್ಪದಿಂದ ಹೇಳಿದ್ದರು, ಈ ರೀತಿ ಹಣ ಎತ್ತಿಯೇ ಗೋಶಾಲೆಯನ್ನು ತೆರೆದಿದ್ದಾರೆ, ಗೋಮಾತೆ ಹೆಸರಿನಲ್ಲಿಯೂ ಹಣ ಲೂಟಿ ಮಾಡುವ ಯತ್ನಾಳರದ್ದು ನಕಲಿ ಹಿಂದೂತ್ವ ಎಂದರು.

ಒಂದೆರೆಡು ರಸ್ತೆ ಬಿಟ್ಟರೆ ಯಾವ ರಸ್ತೆಯೂ ಇಲ್ಲ, ಆಜಾದ್ ರಸ್ತೆಯನ್ನೊಮ್ಮೆ ಹೋಗಿ ಶಾಸಕರು ನೋಡಲಿ, ಅಂಡರ್ ಗ್ರೌಂಡ್ ಕೇಬಲ್ ಮರೀಚಿಕೆಯಾಗಿದೆ, ಎಲ್ಲಿ ಬೇಕು ಅಲ್ಲಿ ವಾಯರ್‌ಗಳು ಜೋತಾಡುತ್ತಿವೆ, ನೀರಿನ ಸಮಸ್ಯೆ ವ್ಯಾಪಕವಾಗಿದೆ, ಈ ಎಲ್ಲ ಸಮಸ್ಯೆಗಳನ್ನು ಬಗೆ ಹರಿಸುವುದನ್ನು ಬಿಟ್ಟು ಕೇವಲ ಬೈಯುವುದನ್ನೇ ಯತ್ನಾಳ ಚಾಳಿ ಮಾಡಿಕೊಂಡಿದ್ದಾರೆ ಎಂದು ಏಕವಚನದಲ್ಲಿಯೇ ವಾಗ್ದಾಳಿ ನಡೆಸಿದರು.



### ಗಾಣಿಗ ಸಮಾಜದ ಬಗ್ಗೆ ಶಾಸಕರಿಂದ ಅಗೌರವ :ಗಡಗಿ ಆರೋಪ

ಗಾಣಿಗ ಸಮುದಾಯದ ಬಗ್ಗೆ ನಗರ ಶಾಸಕ ಯತ್ನಾಳರು ಅಗೌರವ ತೋರುವ ಮಾತನಾಡಿದ್ದಾರೆ ಎಂದು ಯುವ ಮುಖಂಡ ನಂದು ಗಡಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಣಿಗ ಸಮಾಜದ ಬಗ್ಗೆ ಈ ರೀತಿ ಮಾತನಾಡಿರುವುದು ಅಕ್ಷಮ್ಯ ಅಪರಾಧ, ಒಬ್ಬ ಹೋದರೆ ಏನಾಗುತ್ತದೆ ಎಂದು ಕೇವಲವಾಗಿ ಮಾತನಾಡಿದ್ದಾರೆ, ನಮ್ಮ ಸಮಾಜದ ಬಗ್ಗೆ ಅಷ್ಟೊಂದು ಕೀಳುಮಟ್ಟದ ಪದ ಪ್ರಯೋಗ ಮಾಡಿರುವುದು ಎಷ್ಟು ಸರಿ? ಈ ಯತ್ನಾಳರ ಬಗ್ಗೆ ನ್ಯಾಯವಾದಿ ಖಾದ್ರಿ ಶಾಸಕ ಯತ್ನಾಳರ ಅವರ ವಿರುದ್ಧ ಮಾತನಾಡಿದಾಗ ಅವರ ಹಿಂಬಾಲಕರು ಮೌನವಾದರು, ಆದರೆ ನಾನೇ ಅಂದು ವಿರೋಧಿಸಿದೆ, ಆದರೆ ಇಂದು ನನಗೆ ಈ ರೀತಿ ನಡೆಸಿಕೊಳ್ಳುತ್ತಿದ್ದಾರೆ, ಯತ್ನಾಳರ ಹಿಂದೆ ಕಮೀಷನ್ ಏಜೆಂಟರೇ ತುಂಬಿಕೊಂಡಿದ್ದಾರೆ, ಹಿಂದೂ ಯುವಕರನ್ನು ದಾರಿ ತಪ್ಪಿಸುವ ಕೆಲಸ ಮಾಡಬೇಡಿ ಎಂದರು.

### ಎಸ್‌ಐಟಿ ತನಿಖೆ ನಡೆಯಲಿ

ಎಲ್‌ಬಿಎಸ್ ಮಾರುಕಟ್ಟೆ ಪ್ರಾಂಗಣ ಹಾಗೂ ಜಲನಗರದಲ್ಲಿರುವ ವಾಣಿಜ್ಯ ಸಂಕೀರ್ಣದಲ್ಲಿ ಲೀಜ್ ನವೀಕರಣಕ್ಕಾಗಿ ಕೋಟ್ಯಂತರ ರೂ. ಅಕ್ರಮ ನಡೆದಿದೆ. ಇದರಲ್ಲಿ ನಗರ ಶಾಸಕರೇ ಶಾಮೀಲಾಗಿದ್ದಾರೆ, ಈ ಬಗ್ಗೆ ಎಸ್‌ಐಟಿ ತನಿಖೆ ನಡೆಸಿದರೆ ಎಲ್ಲ ಸತ್ಯಾಂಶವೂ ಹೊರಗೆ ಬರುತ್ತದೆ, ಎಲ್‌ಬಿಎಸ್ ಮಾರುಕಟ್ಟೆ ಪ್ರಾಂಗಣದಲ್ಲಿ ಅವ್ಯವಹಾರ, ನಕಲಿ ಹಿಂದೂತ್ವದ ಮುಖ ಬಯಲು ಮಾಡುವ ಕಾರಣಕ್ಕಾಗಿಯೇ ನನಗೆ ಮಟಾಶ್ ಮಾಡುವುದಾಗಿ ಶಾಸಕರು ಹೇಳಿದ್ದಾರೆ ಎಂದರು.

## ವಿಜಯಪುರದಲ್ಲಿ ಹಜ್ ಭವನ ನಿರ್ಮಾಣಕ್ಕೆ ಆಗ್ರಹ

### ಹಜ್ ಭವನ ನಿರ್ಮಾಣ ಹಾಗೂ ಅಲ್ಪಸಂಖ್ಯಾತ ಸಮಿತಿ ಅಧ್ಯಕ್ಷ ಯಾಕೂಬ್ ನಾಟೀಕಾರ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರ, ಬಾಗಲಕೋಟೆ ಜಿಲ್ಲೆಗಳಿಂದ ಲಕ್ಷಾಂತರ ಯಾತ್ರಾರ್ಥಿಗಳು ಪವಿತ್ರ ಹಜ್ ಯಾತ್ರೆಗೆ ಪ್ರಯಾಣ ಬೆಳೆಸುತ್ತಾರೆ, ತರಬೇತಿ ಮೊದಲಾದ ಕಾರ್ಯ ಚಟುವಟಿಕೆಗಳನ್ನು ಸಂಘಟಿಸಿ ಯಾತ್ರಾರ್ಥಿಗಳಿಗೆ ಅನುಕೂಲ ಕಲ್ಪಿಸಲು ವಿಜಯಪುರದಲ್ಲಿ ಹಜ್ ಭವನ ನಿರ್ಮಾಣ ಮಾಡಬೇಕು ಎಂದು ವಿಜಯಪುರದಲ್ಲಿ ಹಜ್ ಭವನ ನಿರ್ಮಾಣ ಹಾಗೂ ಅಲ್ಪಸಂಖ್ಯಾತ ಸಮಿತಿ ಅಧ್ಯಕ್ಷ ಯಾಕೂಬ್ ನಾಟೀಕಾರ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರ, ಬಾಗಲಕೋಟೆಯಿಂದ ಲಕ್ಷಾಂತರ ಯಾತ್ರಾರ್ಥಿಗಳು ಹಜ್ ಹಾಗೂ ಉಮರಾ ಯಾತ್ರೆಗೆ ಪ್ರಯಾಣ ಬೆಳೆಸುತ್ತಾರೆ, ಪ್ರತಿ ಬಾರಿ ತರಬೇತಿ, ಲಸಿಕೆ, ವಿವಿಧ ಯಾತ್ರೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ಕೈಗೊಳ್ಳಲು ಬೆಂಗಳೂರಿಗೆ ಪ್ರಯಾಣ ಬೆಳೆಸುವುದು ಕಷ್ಟವಾಗುತ್ತದೆ, ಹೀಗಾಗಿ ವಿಜಯಪುರ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣಗೊಳ್ಳಬೇಕಿದೆ ಎಂದರು.

ಕಲಬುರ್ಗಿ, ಮಂಗಳೂರು, ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹಜ್ ಭವನ ಮಂಜೂರು ಆಗಿದೆ, ಈ ಹಿನ್ನೆಲೆಯಲ್ಲಿ ವಿಜಯಪುರಕ್ಕೆ ಹಜ್ ಭವನ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಚಿಂತಕ ಡಾ.ಎಂ.ಎಸ್. ಮುಜಾವರ ಮಾತನಾಡಿ, ವಿಮಾನ ನಿಲ್ದಾಣ ಬಳಿ ಜಮೀನು ಇದೆ, ಅಲ್ಲಿ ಹಜ್ ಭವನ ನಿರ್ಮಾಣಕ್ಕೆ ಜಾಗ ಒದಗಿಸಲು ಕೋರಲಾಗಿದೆ ಎಂದರು.



ಪ್ರಮುಖರಾದ ಸರ್ಫರಾಜ್ ಮಿರ್ದೆ ಮಾತನಾಡಿ, ಈ ವಿಷಯದ ಕುರಿತು ಈಗಾಗಲೇ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಸಚಿವರಾದ ಯು.ಟಿ. ಖಾದರ್ ಅವರಿಗೆ ನಮ್ಮ ಸಮಿತಿ ಅಧ್ಯಕ್ಷರು ಕೋರಿದ್ದಾರೆ, ಈ ವಿಷಯವಾಗಿ ಗಮನ ಸೆಳೆಯಲು ಸಮಿತಿಯನ್ನು ನೊಂದಣಿ ಸಹ ಮಾಡಲಾಗಿದೆ, ಅಲ್ಪಸಂಖ್ಯಾತ ಭವನದಲ್ಲಿ ನಮ್ಮ ಸಮುದಾಯದ ಯುವಕರ ಶ್ರೇಯೋಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗಲಿದೆ ಎಂದರು.

ಎಂ.ಎಂ. ಮುಲ್ಲಾ ಆಸೀಫ ಬಾಗವಾನ, ಸಂಘಟನಾ ಕಾರ್ಯದರ್ಶಿ ಮಹಮ್ಮದ್ ಯಾಕೂಬ ಮದ್ನಾಳ, ಅಬೂಬಕರ ಮನಿಯಾರ, ಶಫೀಯುರ್ ರೆಹಮಾನ್ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

# ಭಾರತೀಯ ಸಮಾಜವಾದದ ಜನಕ ಜಯಪ್ರಕಾಶ ನಾರಾಯಣ

■ ಉದಯರಶ್ಮಿ ದಿನಪತ್ರಿಕೆ



ಭಾರತೀಯ ಸ್ವಾತಂತ್ರ್ಯ ಮತ್ತು ಸಮಾಜವಾದದ ಮುಂಚೂಣಿಯಲ್ಲಿ ಅಗ್ರವಾಗಿ ಹೋರಾಟ ಮಾಡಿದ ದಿಟ್ಟ ನಾಯಕ ಜಯಪ್ರಕಾಶ ನಾರಾಯಣ ಅವರು.

ಜಯಪ್ರಕಾಶ ನಾರಾಯಣ್ (11 ಅಕ್ಟೋಬರ್ 1902 08 ಅಕ್ಟೋಬರ್ 1979) ಅವರು ಭಾರತದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ, ಸಮಾಜವಾದಿ ಚಿಂತಕ ಮತ್ತು ರಾಜಕೀಯ ನಾಯಕರಾಗಿದ್ದರು.

ಭಾರತದ ಜನತೆ ಇವರನ್ನು ಪ್ರೀತಿಯಿಂದ "ಜೆ ಪಿ" ಮತ್ತು "ಲೋಕನಾಯಕ" (ಜನರ ನಾಯಕ) ಎಂದು ಕರೆದರು. 1970ರ ದಶಕದ ಮಧ್ಯಭಾಗದಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿಯ ವಿರುದ್ಧ ದೇಶಾದ್ಯಂತ ವಿರೋಧವನ್ನು ಮುನ್ನಡೆಸಿ, ಸಂಪೂರ್ಣ ಕ್ರಾಂತಿಗೆ (Total Revolution) ಕರೆ ನೀಡಿದ್ದಕ್ಕಾಗಿ ಇವರು ಭಾರತೀಯ ರಾಜಕೀಯ ಇತಿಹಾಸದಲ್ಲಿ ಪ್ರಮುಖವಾಗಿ ನೆನಪಿಸಲ್ಪಡುತ್ತಾರೆ.

* **ಜನನ: ಅಕ್ಟೋಬರ್ 11, 1902 (ಸಿತಾಬ್ದಿಯಾರಾ, ಬಿಹಾರ)**
* **ನಿಧನ: ಅಕ್ಟೋಬರ್ 08, 1979 (ಪಾಟ್ನಾ, ಬಿಹಾರ)**
* **ಬಿರುದುಗಳು: ಲೋಕನಾಯಕ, ಜೆ ಪಿ**
* **ಪ್ರಮುಖ ಪ್ರಶಸ್ತಿಗಳು: ಭಾರತರತ್ನ (1999ರಲ್ಲಿ ಮರಣೋತ್ತರ), ರಾಮನ್ ಮ್ಯಾಗ್ಸೇಸೆ ಪ್ರಶಸ್ತಿ (1965).**

**ಜೀವನ ಮತ್ತು ಸಾಧನೆಗಳು**

**1. ಸ್ವಾತಂತ್ರ್ಯ ಹೋರಾಟ:**

ಮಹಾತ್ಮ ಗಾಂಧಿ ಮತ್ತು ಮಾರ್ಕ್ಸ್‌ವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದ ಇವರು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾದರು. 1942ರ 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿ) ಚಳುವಳಿಯಲ್ಲಿ ಇವರು ವಹಿಸಿದ ಭೂಗತ ಹೋರಾಟದ ಪಾತ್ರ ಅತ್ಯಂತ ಪ್ರಮುಖವಾದುದು.

**2. ಸಮಾಜವಾದಿ ಸಿದ್ಧಾಂತ:** ಆಚಾರ್ಯ ನರೇಂದ್ರ ದೇವ್ ಅವರೊಂದಿಗೆ ಸೇರಿ 'ಕಾಂಗ್ರೆಸ್ ಸಮಾಜವಾದಿ ಪಕ್ಷ'ವನ್ನು (Congress Socialist Party) ಸ್ಥಾಪಿಸಿದರು. ಸ್ವಾತಂತ್ರ್ಯದ ನಂತರ ವಿನೋಬಾ ಭಾವೆಯವರ 'ಭೂದಾನ ಚಳುವಳಿ'ಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

**3. ಜೆಪಿ ಚಳುವಳಿ ಮತ್ತು ಸಂಪೂರ್ಣ ಕ್ರಾಂತಿ:** 1974ರಲ್ಲಿ ಬಿಹಾರದಲ್ಲಿ ಭ್ರಷ್ಟಾಚಾರ, ನಿರುದ್ಯೋಗ ಮತ್ತು ಬೆಲೆ ಏರಿಕೆ ವಿರುದ್ಧ ವಿದ್ಯಾರ್ಥಿಗಳು ಆರಂಭಿಸಿದ ಹೋರಾಟದ ನೇತೃತ್ವವನ್ನು ವಹಿಸಿಕೊಂಡರು. ಇದು ನಂತರ ಇಡೀ ದೇಶಕ್ಕೆ ಹರಡಿ 'ಜೆಪಿ ಚಳುವಳಿ' ಎಂದೇ ಪ್ರಸಿದ್ಧಿಯಾಯಿತು. ಸಮಾಜ, ರಾಜಕೀಯ, ಶಿಕ್ಷಣ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತರಲು ಇವರು ಸಂಪೂರ್ಣ ಕ್ರಾಂತಿ ಯ ಘೋಷಣೆ ಮಾಡಿದರು.

**4. ಮೊದಲ ಕಾಂಗ್ರೆಸ್ಸೇತರ ಸರ್ಕಾರ:**

ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿಯ ನಂತರ, 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್ಲಾ ವಿರೋಧ ಪಕ್ಷಗಳನ್ನು ಒಗ್ಗೂಡಿಸಿ 'ಜನತಾ ಪಕ್ಷ' ರಚನೆಗೆ ಕಾರಣರಾದರು. ಇದರಿಂದಾಗಿ ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ (ಮೊರಾರ್ಜಿ ದೇಸಾಯಿ ನೇತೃತ್ವದಲ್ಲಿ) ಅಧಿಕಾರಕ್ಕೆ ಬಂದಿತು.

**5. ಜಯಪ್ರಕಾಶ ನಾರಾಯಣ್ :** (ಜೆ.ಪಿ) ಅವರು ಚಂಬಲ್ ಕಣಿವೆಯ ಕ್ರೂರ ಡಕಾಯಿತರನ್ನು ಅಹಿಂಸಾತ್ಮಕ ಮಾರ್ಗದ ಮೂಲಕ ಪರಿವರ್ತಿಸಿ, ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದರು. ಜೆ.ಪಿ ಅವರು ಡಕಾಯಿತರ ಸಮಸ್ಯೆಯನ್ನು ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಾಗಿ ನೋಡದೆ, ಅದೊಂದು ಸಾಮಾಜಿಕ-ಆರ್ಥಿಕ ಮತ್ತು ಮಾನಸಿಕ ಸಮಸ್ಯೆ ಎಂದು ನಂಬಿದ್ದರು.

1972ರಲ್ಲಿ ನಡೆದ ಈ ಐತಿಹಾಸಿಕ ಪರಿವರ್ತನೆಯ ಪ್ರಮುಖ ವಿವರಗಳು ಹೀಗಿವೆ:

**1. ಆಪರೇಷನ್ ಪರ್ಸುಯೇಷನ್ (ಮನವೊಲಿಕೆ ಚಳುವಳಿ)**

ವಿನೋಬಾ ಭಾವೆಯವರ ಹಿಂದಿನ ಪ್ರಯತ್ನಗಳಿಂದ ಪ್ರೇರಿತರಾದ ಜಯಪ್ರಕಾಶ ನಾರಾಯಣ್ ಅವರು ಚಂಬಲ್ ಗ್ವಾಲಿಯರ್ ಪ್ರದೇಶದ ದುರ್ಗಮ ಕಣಿವೆಗಳಲ್ಲಿ ಅಡಗಿದ್ದ ಡಕಾಯಿತರನ್ನು ಖುದ್ದಾಗಿ ಭೇಟಿಯಾದರು. ಕಣಿವೆಯ ಡಕಾಯಿತರು ಸಮಾಜದ ದೌರ್ಜನ್ಯ, ಜಮೀನ್ದಾರಿ ಪದ್ಧತಿ ಮತ್ತು ಅನ್ಯಾಯಗಳಿಗೆ ಬಲಿಯಾಗಿ ಆಯುಧ ಹಿಡಿದ ಬಂಡುಕೋರರು (ಬಾಗಿಗಳು) ಎಂಬುದನ್ನು ಅರಿತು ಅವರೊಂದಿಗೆ ಮಾನವೀಯತೆಯಿಂದ ಮಾತನಾಡಿದರು.

**2. ಗಾಂಧೀಜಿ ಚಿತ್ರದ ಮುಂದೆ ಶಸ್ತ್ರಾಸ್ತ್ರ ಶರಣಾಗತಿ**

ಜೆ.ಪಿ ಅವರ ನಿರಂತರ ಪ್ರಯತ್ನ ಮತ್ತು ನೈತಿಕ ಮನವೊಲಿಕೆಯ ಫಲವಾಗಿ, 1972 ಏಪ್ರಿಲ್ 14 ಮತ್ತು 16 ರಂದು ಮಧ್ಯಪ್ರದೇಶದ ಜೌರಾದಲ್ಲಿರುವ ಮಹಾತ್ಮ ಗಾಂಧಿ ಸೇವಾ ಆಶ್ರಮದಲ್ಲಿ ಬೃಹತ್ ಸರಣಾಗತಿ ಕಾರ್ಯಕ್ರಮ ನಡೆಯಿತು.

* ಅಂದಿನ ಕಾಲಕ್ಕೆ ಅತ್ಯಂತ ಭೀಕರ ಹಾಗೂ ತಲೆಗೆ 2 ಲಕ್ಷ ರೂ. ಬಹುಮಾನ ಹೊಂದಿದ್ದ ಮೊಹರ್ ಸಿಂಗ್ ಮತ್ತು ಮಾಧೋ ಸಿಂಗ್ ಸೇರಿದಂತೆ ಸುಮಾರು 400 ಕ್ಕೂ ಹೆಚ್ಚು ಕ್ರೂರ ಡಕಾಯಿತರು ಜೆ.ಪಿ ಅವರ ಸಮ್ಮುಖದಲ್ಲಿ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟರು.

* ಅವರೆಲ್ಲರೂ ಗಾಂಧೀಜಿಯವರ ಭಾವಚಿತ್ರದ ಮುಂದೆ ತಮ್ಮ ಆಧುನಿಕ ಬಂದೂಕುಗಳನ್ನು ಅರ್ಪಿಸಿ, "ಮಹಾತ್ಮ ಗಾಂಧಿ ಕಿ ಜೈ", "ಲೋಕನಾಯಕ ಜಯಪ್ರಕಾಶ್ ಕಿ ಜೈ" ಎಂದು ಘೋಷಣೆ ಕೂಗುತ್ತಾ ಕಣ್ಣೀರು ಹಾಕಿದರು.

**3. ಪುನರ್ವಸತಿ ಮತ್ತು ಮುಕ್ತ ಜೈಲು (Rehabilitation)**

ಡಕಾಯಿತರನ್ನು ಪರಿವರ್ತಿಸಲು ಜೆ.ಪಿ ಅವರು ಸರ್ಕಾರಗಳೊಂದಿಗೆ ಮಾತುಕತೆ ನಡೆಸಿ ಕೆಲವು ಪ್ರಮುಖ ಒಪ್ಪಂದಗಳನ್ನು ಮಾಡಿಕೊಂಡರು:

* ಶರಣಾದ ಯಾರಿಗೂ ಮರಣದಂಡನೆ (ಗಲ್ಲು ಶಿಕ್ಷೆ) ನೀಡಬಾರದು ಎಂಬ ಭರವಸೆ ಕೊಡಿಸಿದರು.

* ಅವರಿಗಾಗಿ 'ನವಜೀವನ ಕೇಂದ್ರ' ಎಂಬ ಮುಕ್ತ ಜೈಲುಗಳನ್ನು (Open Jajl) ಸ್ಥಾಪಿಸಿ, ಶಿಕ್ಷೆಯ ಅವಧಿಯಲ್ಲಿ ಗೌರವಯುತವಾಗಿ ಬಾಳಲು ಕಲಿಸಿಕೊಟ್ಟರು.

* ಜೈಲಿನಿಂದ ಬಿಡುಗಡೆಯಾದ ನಂತರ ಅವರು ಮುಖ್ಯವಾಹಿನಿಗೆ ಬರಲು ಕೃಷಿ ಭೂಮಿ, ಹಣಕಾಸಿನ ನೆರವು ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಒದಗಿಸಲಾಯಿತು.

ಈ ಅದ್ಭುತ ಹೃದಯ ಪರಿವರ್ತನೆಯ ಚಳುವಳಿಯಿಂದಾಗಿ ಚಂಬಲ್ ಕಣಿವೆಯಲ್ಲಿ ದಶಕಗಳ ಕಾಲ ನಡೆದಿದ್ದ ರಕ್ತಪಾತ ಕೊನೆಗೊಂಡು ಶಾಂತಿ ನೆಲೆಸಿತು. ಪರಿವರ್ತನೆಗೊಂಡ ಅನೇಕ ಮಾಜಿ ಡಕಾಯಿತರು ನಂತರದ ದಿನಗಳಲ್ಲಿ ಸಾಮಾನ್ಯ ರೈತರಾಗಿ, ಸಮಾಜ ಸೇವಕರಾಗಿ ಮತ್ತು ರಾಜಕೀಯದಲ್ಲೂ ಗುರುತಿಸಿಕೊಂಡು ಗೌರವಯುತ ಜೀವನ ನಡೆಸಿದರು.

ಇವರ ಗೌರವಾರ್ಥವಾಗಿ ಬಿಹಾರದ ಪಾಟ್ನಾದಲ್ಲಿರುವ ವಿಮಾನ ನಿಲ್ದಾಣಕ್ಕೆ ಜಯಪ್ರಕಾಶ್ ನಾರಾಯಣ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಡಲಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಯ್ದುಕೊಳ್ಳಲು ಅಧಿಕಾರದ ಆಸೆ ಇಲ್ಲದೆ ಹೋರಾಡಿದ ಇವರ ವಿಚಾರಧಾರೆಗಳು ಇಂದಿಗೂ ಭಾರತೀಯ ರಾಜಕೀಯಕ್ಕೆ ದಾರಿದೀಪವಾಗಿವೆ.



**ಇವರ ಕೃತಿಗಳು**

ಜಯಪ್ರಕಾಶ ನಾರಾಯಣ್ (ಜೆ.ಪಿ) ಅವರು ಸಮಾಜವಾದ, ರಾಜಕೀಯ ಚಿಂತನೆಗಳು ಮತ್ತು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಸುಧಾರಣೆಗಳ ಕುರಿತು ಹಲವಾರು ಪ್ರಮುಖ ಪುಸ್ತಕಗಳು ಹಾಗೂ ಲೇಖನಗಳನ್ನು ಬರೆದಿದ್ದಾರೆ. ಅವರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳಲು ಅವರ ಕೃತಿಗಳು ಅತ್ಯಂತ ಮುಖ್ಯವಾದ ಆಕರಗಳಾಗಿವೆ.

**ಅವರ ಪ್ರಮುಖ ಕೃತಿಗಳ ಪಟ್ಟಿ ಇಲ್ಲಿದೆ:**

**ಪ್ರಮುಖ ಪುಸ್ತಕಗಳು (Books Written by JP)**

**1. ವೈ ಸೋಷಿಯಲಿಸಂ? (Why Socialism? – 1936):**
**2. ಎ ಪ್ಲೀ ಫಾರ್ ರಿಕನ್‌ಸ್ಟ್ರಕ್ಷನ್ ಆಫ್ ಇಂಡಿಯನ್ ಪಾಲಿಟಿ (A Plea for Reconstruction of Indian Polity - 1959):**
**3. ಪ್ರಿಸನ್ ಡೈರಿ (Prison Diary – 1977):**
**4. ಫ್ರಮ್ ಸೋಷಿಯಲಿಸಂ ಟು ಸರ್ವೋದಯ (From Socialism to Sarvodaya):**
**5. ಸ್ವರಾಜ್ ಫಾರ್ ದಿ ಪೀಪಲ್ (Swaraj for the People):**
**6. ಟುವರ್ಡ್ಸ್ ಟೋಟಲ್ ರೆವಲ್ಯೂಷನ್ (Towards Total Revolution – 1978):**

**ಇತರೆ ಪ್ರಮುಖ ಸಂಕಲನಗಳು**

* ಫೇಸ್ ಟು ಫೇಸ್ (Face to Face)

* ನೇಷನ್ ಬಿಲ್ಡಿಂಗ್ ಇನ್ ಇಂಡಿಯಾ (Nation Building in India): ಭಾರತದ ರಾಷ್ಟ್ರ ನಿರ್ಮಾಣ ಪ್ರಕ್ರಿಯೆ ಮತ್ತು ಅದರ ಸವಾಲುಗಳ ಕುರಿತಾದ ಲೇಖನಗಳ ಸಂಗ್ರಹ.

* ಸೋಷಿಯಲಿಸಂ, ಸರ್ವೋದಯ ಅಂಡ್ ಡೆಮಾಕ್ರಸಿ (Socialism, Sarvodaya and Democracy)

ಇಂತಹ ಅಪರೂಪದ ಪ್ರಬುದ್ಧ ಪ್ರಾಮಾಣಿಕ ವೈಚಾರಿಕ ಸಮಾಜವಾದಿ ಚಿಂತಕ ಶ್ರೀ ಜಯಪ್ರಕಾಶ ನಾರಾಯಣ ಅವರು ಇಂದಿನ ಭಾರತೀಯ ಪ್ರಜಾಪ್ರಭುತ್ವದಿಂದ ದೂರಾದರೆ ಎನ್ನುವ ಆತಂಕ ನಮ್ಮಲ್ಲಿ ಕಾಡುತ್ತದೆ

ತಮ್ಮ ಚಿಂತನೆ ಆಲೋಚನೆ ಸಿದ್ಧಾಂತಗಳಿಂದ ಭಾರತೀಯ ಸಾಮಾಜಿಕ ರಾಜಕೀಯ ಸಾರ್ವಜನಿಕ ಬದುಕನ್ನು ಹಸನು ಮಾಡಿದ ಲೋಕ ನಾಯಕ ಶ್ರೀ ಜಯಪ್ರಕಾಶ ನಾರಾಯಣ ಅವರಿಗೆ ಸಹಸ್ರ ಸಹಸ್ರ ನಮನಗಳು.




## ಸಂಸ್ಕಾರದಿಂದಲೇ ಮನುಷ್ಯನ ವ್ಯಕ್ತಿತ್ವ ವಿಕಾಸ: ಪೂಜ್ಯ ಚನ್ನಮಲ್ಲ ಸ್ವಾಮೀಜಿ



ಕಲಬುರಗಿ : ಶಿಲ್ಪಿಯ ಕೈಚಳಕದಿಂದ ಕಲ್ಲಿಗೆ ಸಂಸ್ಕಾರ ದೊರೆತಾಗ ಅದು ಮಂದಿರದಲ್ಲಿ ಪೂಜನೀಯ ಮೂರ್ತಿಯಾಗುವಂತೆ, ಮನುಷ್ಯನಿಗೂ ಉತ್ತಮ ಸಂಸ್ಕಾರ ಲಭಿಸಿದರೆ ಮಾತ್ರ ಆತನ ವ್ಯಕ್ತಿತ್ವ ವಿಕಾಸಗೊಂಡು ಬದುಕು ಸಾರ್ಥಕವಾಗುತ್ತದೆ ಎಂದು ಹೊಸಮಠ ನರೋಣ ಹಾಗೂ ಗೋಳಾದ ಪೂಜ್ಯ ಚನ್ನಮಲ್ಲ ಸ್ವಾಮಿಗಳು ಅಭಿಪ್ರಾಯಪಟ್ಟರು.

ನಗರದ ಅಡ್ವೋಕೇಟ್ಸ್ ಕಾಲೋನಿಯ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ ದಾನಮ್ಮ ದೇವಿಯ ಜೀವನ ದರ್ಶನದ ಪುರಾಣ ಪ್ರವಚನಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಾನಮ್ಮ ದೇವಿಯ ಅವತಾರದ ಹಿನ್ನೆಲೆಯನ್ನು ವಿವರಿಸಿದ ಅವರು, ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಉಮರಾಣಿ ಗ್ರಾಮದ ಅನಂತರಾಯ ಮತ್ತು ಶಿರಸಮ್ಮ ದಂಪತಿಗಳ ಪುಣ್ಯದ ಫಲವಾಗಿ ದಾನಮ್ಮ (ಲಿಂಗಮ್ಮ) ಜನಿಸಿದ ಘಟನೆಯನ್ನು ಭಕ್ತಿಭಾವದಿಂದ ವರ್ಣಿಸಿದರು. ಇಂತಹ ಸಂಸ್ಕಾರ ವಂತ ಶ್ರೇಷ್ಠ ಮನೆತನದಲ್ಲಿ ಜನಿಸಿದ ಮಕ್ಕಳು ಜಗತ್ತಿಗೆ ಬೆಳಕಾಗುತ್ತಾರೆ ಎಂಬುದಕ್ಕೆ ದಾನಮ್ಮ ದೇವಿಯ ಜೀವನವೇ ಸಾಕ್ಷಿ ಎಂದರು.

ಇಂದಿನ ಸಮಾಜದ ಮೌಲ್ಯಗಳ ಕುಸಿತದ ಬಗ್ಗೆ ಕಳವಳ ವ್ಯಕ್ತಪಡಿಸಿದ ಶ್ರೀಗಳು, ಭಾರತೀಯ ಸಂಸ್ಕೃತಿಯಲ್ಲಿ ಅತಿಥಿ ದೇವೋಭವ ಎಂಬ ಉದಾತ್ತ ಭಾವನೆಯಿತ್ತು. ಆದರೆ, ಇಂದಿನ ದಿನಗಳಲ್ಲಿ ಕೆಲವರು ಮನೆಗಳ ಮುಂದೆ ನಾಯಿಗಳಿವೆ ಎಚ್ಚರಿಕೆ ಎಂಬ ಫಲಕಗಳನ್ನು ಹಾಕುವ ಮೂಲಕ ಅತಿಥಿಗಳನ್ನು ದೂರವಿಡುವ ಸ್ವಾರ್ಥ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದ್ದಾರೆ. ಇದು ಬದಲಾಗಬೇಕು. ದಾನಧರ್ಮಗಳನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ, ಅಹಂಕಾರವನ್ನು ಬಿಟ್ಟು ನಿಷ್ಕಾಮವಾಗಿ ಮಾಡಬೇಕು ಎಂದರು.

ಪ್ರವಚನದ ಸಂದರ್ಭದಲ್ಲಿ ದಾನಮ್ಮ ದೇವಿಯ ನಾಮಕರಣ ಹಾಗೂ ತೊಟ್ಟಿಲು ಕಾರ್ಯಕ್ರಮದ ಸನ್ನಿವೇಶ ಇದ್ದುದರಿಂದವೇದಿಕೆ ಮೇಲೆ ತೊಟ್ಟಿಲು ಕಾರ್ಯಕ್ರಮವನ್ನೇ ಸೃಷ್ಟಿಸಲಾಯಿತು. ಕಾಲನಿಯ ಅಕ್ಕನ ಬಳಗದ ಮಹಿಳೆಯರು ಸಂಭ್ರಮದಿಂದ ಸಾಂಪ್ರದಾಯಿಕ ಗೀತೆಗಳನ್ನು ಹಾಡುತ್ತ, ಒಡಪು ಹೇಳುತ್ತ ದಾನಮ್ಮ ತಾಯಿಯ ಅಂದಿನ ದೃಶ್ಯವನ್ನು ಮರುಸೃಷ್ಟಿ ಮಾಡಿದರು.

## ತಡಕಲ ವೈಭವದ ದಸರಾ ಉತ್ಸವ ಆರಂಭ



ಆಳಂದ: ತಾಲೂಕಿನ ತಡಕಲ ಗ್ರಾಮದಲ್ಲಿ ತಮ್ಮ ತಾಯಿಯ ಸ್ಮರಣಾರ್ಥ ನಿರ್ಮಿಸಿರುವ ಅಂಬಾ ಭವಾನಿ ದೇವಸ್ಥಾನದಲ್ಲಿ ವೈಭವದ ದಸರಾ ಉತ್ಸವಕ್ಕೆ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಚಾಲನೆ ನೀಡಿದರು.

ಪ್ರಥಮ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಜನತೆ ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದ್ದಾರೆ. ಈಗಾಗಲೇ ದಿ.11 ರಂದು ಘಟಸ್ಥಾಪನೆಯೊಂದಿಗೆ ಧಾರ್ಮಿಕ ವಿಧಿ ವಿಧಾನಗಳು ಆರಂಭಗೊಂಡಿವೆ. ದಿ.12 ರಂದು ನವನಿಹಾಳ- ಜನವಾಡ ಭಜನಾ ತಂಡಗಳಿಂದ ಭಜನೆ, ದಿ.13ರಂದು ಕೋಹಿನೂರ- ಬಂಗರಗಾ ತಂಡಗಳಿಂದ ಭಜನೆ, ದಿ.14ರಂದು ಗುಂಡಣ್ಣಾ ಡಿಗ್ಗಿ ಮತ್ತು ತಂಡದವರಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ, ದಿ.15ರಂದು ಬಟಗೇರಾ ವಾಡಿ- ಬೆಳಮಗಿ ತಂಡಗಳಿಂದ ಭಜನೆ, ದಿ.16ರಂದು ಕಲಬುರಗಿಯ ಸಂಗೀತ ಕಲಾವಿದರಿಂದ ರಸಮಂಜರಿ, ದಿ.17 ರಂದು ತಾಯಿಯ ಕುರಿತು ಪ್ರಬಂಧ ಸ್ಪರ್ಧೆ, ದಿ.18ರಂದು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ಖ್ಯಾತ ವೈದ್ಯರಾದ ಡಾ. ಬಾಬುರಾವ ರುದ್ರವಾಡಿ ಮತ್ತು ತಂಡದವರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸಾಯಂಕಾಲ ಚಿಕ್ಕಮಗಳೂರಿನ ಖ್ಯಾತ ಸಂಸ್ಕೃತಿ ಚಿಂತಕಿ ನಾಗಶ್ರೀ ತ್ಯಾಗರಾಜ ಅವರಿಂದ ವಿಶೇಷ ಉಪನ್ಯಾಸ, ದಿ.19ರಂದು ಮುಂಜಾನೆ 11 ಗಂಟೆಗೆ ಆಳಂದ ತಾಲೂಕಿನ ಕಲಾವಿದರಿಗಾಗಿ ಗಾನ ಕೋಗಿಲೆ ಗಾಯನ ಸ್ಪರ್ಧೆ ಸಾಯಂಕಾಲ ಪ್ರಭಾವತಿ ಭಜನಾ ಮಂಡಳಿ ಹಾಗೂ ಅಕ್ಕಮಹಾದೇವಿ ಭಜನಾ ಮಂಡಳಿಯಿಂದ ಜಾಗರಣೆ. ದಿ. 20ರಂದು ಮುಂಜಾನೆ 11 ಗಂಟೆಗೆ ಉತ್ತಮ ಲೇಖಕರಿಗೆ, ಉತ್ತಮ ಭಜನಾ ತಂಡದವರಿಗೆ, ಅಂಬವ್ವಾ ಮಾತೃರತ್ನ ಪ್ರಶಸ್ತಿ ಹಾಗೂ ನಗದು ಬಹುಮಾನ ಕಾರ್ಯಕ್ರಮ ಜರುಗಲಿದೆ.



**ಕಲಬುರಗಿ: ಕಬ್ಬು ಬೆಳೆಗಾರರ ಹಲವು ಬೇಡಿಕೆಗಳಿಗೆ ಆಗ್ರಹಿಸಿ ವಿವಿಧ ರೈತ ಸಂಘಟನೆಯವರು ಇಂದು ನಗರದ ರಾಮಮಂದಿರ ವೃತ್ತ ಮತ್ತು ಹುಮನಾಬಾದ್ ರಿಂಗ್ ರಸ್ತೆಯ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.ರಾಮಮಂದಿರ ವೃತ್ತದಲ್ಲಿ ಅಹೋರಾತ್ರಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಶಾಸಕ ಅಲ್ಲಮಪ್ರಭು ಪಾಟೀಲ ಪಾಲ್ಗೊಂಡು ಬೆಂಬಲ ಸೂಚಿಸಿದರು.ರೈತ ಮುಖಂಡರಾದ ಜಗದೀಶ ಪಾಟೀಲ ರಾಜಾಪುರ ,ಗುರಪ್ಪ ಪಾಟೀಲ,ಸಿದ್ಧರಾಮ ಬೆಣ್ಣೂರ,ಶರಣಬಸಪ್ಪ ಮಮಶೆಟ್ಟಿ,ವೀರೇಶ ಚಿತ್ತಾಪುರ,ಸಸ್ತಾಪುರ ಸೇರಿದಂತೆ ಹಲವರು ಪಾಲ್ಗೊಂಡರು.**

## ವಿಮರ್ಶೆಯ ತಾತ್ವೀಕರಣ ಸಾಹಿತ್ಯದ ಮರುಪರಿಶೀಲನೆಗೆಹೊಸದಾರಿ ತೋರಲಿ




ಕಲಬುರಗಿ:ಕರ್ನಾಟಕಕೇಂದ್ರೀಯವಿಶ್ವವಿದ್ಯಾಲಯದ (ಸಿಯುಕೆ) ಕನ್ನಡ ವಿಭಾಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ವಿಮರ್ಶೆಯ ತಾತ್ವೀಕರಣ' ವಿಷಯದ ಕುರಿತು ಮೂರು ದಿನಗಳ ಕಮ್ಮಟದ ಸಮಾರೋಪ ಸಮಾರಂಭ ಇತ್ತೀಚೆಗೆ ನಡೆಯಿತು.ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಸಬೀಹಾ ಭೂಮಿಗೌಡ ಅವರು, ಕೃತಿ ವಿಮರ್ಶೆಯನ್ನು ವೈಯಕ್ತಿಕ ನೆಲೆಯಲ್ಲಿ ಮಾಡುವುದಕ್ಕಿಂತ ಸಂಘಟಿತ ನೆಲೆಯಲ್ಲಿ ಮಂಥನ ಮತ್ತು ವಿಚಾರ ವಿನಿಮಯದ ಮೂಲಕ ನಡೆಸಿದಾಗ ಮಾತ್ರ ಸಾಹಿತ್ಯದ ಬಹುಸಾಧ್ಯತೆಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವೈಯಕ್ತಿಕ ಇಚ್ಛಾಶಕ್ತಿ, ಗುರಿ ಮತ್ತು ಆಸಕ್ತಿಯ ಆಧಾರದ ಮೇಲೆ ಸಂಶೋಧನೆ ಹಾಗೂ ಕೃತಿ ವಿಮರ್ಶೆ ಮೊದಲಿನಿಂದಲೂ ನಡೆಯುತ್ತಿವೆ. ಆದರೆ, ಅವುಗಳ ಪ್ರಮಾಣ ಸೀಮಿತವಾಗಿದೆ. ಸಾಂಸ್ಥಿಕ ನೆಲೆಯಲ್ಲಿ ಇಂತಹ ಪ್ರಯತ್ನಗಳಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನ ದೊರೆತಾಗ ಅವುಗಳ ಪರಿಣಾಮಕಾರಿತ್ವ ಹೆಚ್ಚುತ್ತದೆ. ತಕ್ಷಣದ ಪ್ರಯೋಜನಕ್ಕಿಂತ ಮುಂದಿನ ಹತ್ತು ಹಲವು ವರ್ಷಗಳವರೆಗೆ ಮೌಲ್ಯಯುತ ಕೊಡುಗೆ ನೀಡುವ ಸಂಶೋಧನೆಗಳಿಗೆ ಹೆಚ್ಚಿನ ಮಹತ್ವವಿದೆ. ವಿಮರ್ಶೆ ಮತ್ತು ಸೃಜನಶೀಲ ಬರವಣಿಗೆಯ ಚುರುಕುತನವನ್ನು ಬೆಳೆಸಲು ಇಂತಹ ಕಮ್ಮಟಗಳು ಸಹಕಾರಿಯಾಗುತ್ತವೆ. ಈ ಕಮ್ಮಟವು ವಿಸ್ತೃತ ಹುಡುಕಾಟದ ಮೊದಲ ಹೆಜ್ಜೆಯಾಗಿದ್ದು, ಮುಂದಿನ ದಿನಗಳಲ್ಲಿ ದೃಢವಾಗಿ ಮತ್ತು ಸ್ಪಷ್ಟವಾಗಿ ರೂಪುಗೊಳ್ಳಲಿ ಎಂದು ಆಶಿಸಿದರು. ಇಂದು ಸಾಹಿತ್ಯವನ್ನು ತುಂಡು ತುಂಡಾಗಿ ಅಧ್ಯಯನ ಮಾಡುವ ಪ್ರವೃತ್ತಿ ಅಪಾಯಕಾರಿಯಾಗಿದೆ. ಸಾಹಿತ್ಯ ವಿಮರ್ಶೆಯಲ್ಲಿನ ಪೂರ್ವಗ್ರಹಗಳನ್ನು ಗುರುತಿಸಿ, ಈಗಾಗಲೇ ಒಪ್ಪಿತವಾಗಿರುವ ವಿಚಾರಗಳನ್ನು ಮರುಪರಿಶೀಲಿಸುವ ಅಗತ್ಯವಿದೆ. ಪಠ್ಯಗಳ ಹೊಸ ಓದು, ಮರುಮೌಲ್ಯಮಾಪನ ಮತ್ತು ಸಂಶೋಧನೆಯಿಂದ ಹೊರಹೊಮ್ಮುವ ಹೊಸ ಸತ್ಯಗಳು ಶೈಕ್ಷಣಿಕ ಪಠ್ಯಕ್ರಮಗಳಲ್ಲಿ ಯಾವಾಗ ಸ್ಥಾನ ಪಡೆಯುತ್ತವೆ ಎಂಬ ಪ್ರಶ್ನೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯ ವಿಮರ್ಶೆಯಲ್ಲಿ ಲೇಖಕರು, ಸಂಶೋಧಕರು ಮತ್ತು ಅನುವಾದಕರು ಬಳಸುವ ಭಾಷೆ ಹಾಗೂ ಪರಿಕಲ್ಪನೆಗಳಲ್ಲಿನ ಪೂರ್ವಗ್ರಹಗಳನ್ನು ಗುರುತಿಸುವುದು ಮುಖ್ಯ. ವಿಶೇಷವಾಗಿ ಸ್ತ್ರೀವಾದಿ ದೃಷ್ಟಿಕೋನವನ್ನು ಕಡೆಗಣಿಸುವುದು ಮತ್ತು ಮಹಿಳೆಯರ ಪ್ರಶ್ನೆಗಳಿಗೆ ಸೂಕ್ತ ಪ್ರಾತಿನಿಧ್ಯ ದೊರೆಯದಿರುವುದು ವಿಮರ್ಶಾ ವಲಯದ ಪ್ರಮುಖ ಸವಾಲುಗಳಾಗಿವೆ. ಯಾವುದೇ ವಿಚಾರದ ಪರಿಕಲ್ಪನೆಯನ್ನು ತಾತ್ವೀಕರಿಸುವ ಸಂದರ್ಭದಲ್ಲಿ ಹೆಚ್ಚು ಪ್ರಶ್ನೆಗಳನ್ನು ಕೇಳಿದಷ್ಟೂ ಅದರ ಕುರಿತು ಸ್ಪಷ್ಟತೆ ಮತ್ತು ಪರಿಹಾರದ ಸಾಧ್ಯತೆಗಳು ಹೆಚ್ಚುತ್ತವೆ. ಹೀಗಾಗಿ ಯುವ ಪೀಳಿಗೆ ಮತ್ತು ವಿಮರ್ಶಕರು ಈ ದಿಕ್ಕಿನಲ್ಲಿ ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್. ಎನ್. ಮುಕುಂದರಾಜ್ ಅವರು ಮಾತನಾಡಿ, ಸಾಹಿತ್ಯ ವಿದ್ಯಾರ್ಥಿಗಳಲ್ಲಿ ವಿಮರ್ಶಾ ಪ್ರಜ್ಞೆ ಬೆಳೆಸುವುದು ಅತ್ಯಗತ್ಯ ಎಂದರು. ವಿಮರ್ಶೆಯು ಮನುಷ್ಯನನ್ನು ಪರಿಪಕ್ವಗೊಳಿಸುತ್ತದೆ. ಸಾಹಿತ್ಯದ ಅಕ್ಷರಗಳ ಮೂಲಕ ಜನರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಸಾಹಿತ್ಯ ವಿದ್ಯಾರ್ಥಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ನಿರ್ದೇಶಕ ಪ್ರೊ. ಬಸವರಾಜ ಎಂ. ಕೋಡಗುಂಟಿ ಹಾಗೂ ಹೊಸಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ರಾಮಲಿಂಗಪ್ಪ ಟಿ. ಬೇಗೂರು ಮಾತನಾಡಿದರು. ಸಿಯುಕೆ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಶಿವಗಂಗಾ ರುಮ್ಮಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೂರು ದಿನಗಳ ಕಮ್ಮಟದಲ್ಲಿ ಹತ್ತು ಗೋಷ್ಠಿಗಳು, ಚರ್ಚೆಗಳು ಹಾಗೂ ಸಂವಾದ ಕಾರ್ಯಕ್ರಮಗಳು ನಡೆದವು. ರಾಜ್ಯದ ವಿವಿಧ ಭಾಗಗಳ ಸಾಹಿತಿಗಳು, ವಿದ್ವಾಂಸರು ಮತ್ತು ಚಿಂತಕರು ಭಾಗವಹಿಸಿ ಕನ್ನಡ ಸಾಹಿತ್ಯ ವಿಮರ್ಶೆಯ ವಿವಿಧ ಆಯಾಮಗಳ ಕುರಿತು ವಿಚಾರ ವಿನಿಮಯ ನಡೆಸಿದರು. ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ಕಮ್ಮಟದ ಮೂರು ದಿನಗಳ ಅನುಭವ ಹಾಗೂ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವಿಕ್ರಮ ವಿಸಾಜಿ, ಡಾ. ಅಪ್ಪಗೆರೆ ಸೋಮಶೇಖರ, ಡಾ. ರೋಹಿಣಾಕ್ಷ ಶಿರ್ಲಾಲು, ಡಾ.ವಿಜಯಕುಮಾರ್, ಡಾ.ರಾಜಶ್ರೀ ಸೇರಿದಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರು, ಸಂಶೋಧನಾ ವಿದ್ಯಾರ್ಥಿಗಳು, ಸಂಪನ್ಮೂಲ ವ್ಯಕ್ತಿಗಳು ಹಾಗೂ ರಾಜ್ಯದ ವಿವಿಧ ಭಾಗಗಳ ಶಿಬಿರಾರ್ಥಿಗಳು ಆನ್‌ಲೈನ್ ಮತ್ತು ಆನ್‌ಲೈನ್ ಮೂಲಕ ಭಾಗವಹಿಸಿದ್ದರು. ನಕ್ಷೆಗಳನ್ನುನೋಡಿ

## ದುರ್ಗದ ಹುಲಿ ಮದಕರಿ ನಾಯಕ ಉತ್ತಮ ದೊರೆ



ಕಲಬುರಗಿ : ಭಾರತ ದೇಶದಲ್ಲಿದ್ದ ಹಲವು ಸಂಸ್ಥಾನಗಳಲ್ಲಿ ಒಂದಾದ ಚಿತ್ರದುರ್ಗದ ಕೊನೆಯ ಆರಸನಾಗಿದ್ದ ವೀರ ಮದಕರಿ ನಾಯಕ ಆಡಳಿತ ಮಾದರಿಯಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಖಾದ್ರಿ ಚೌಕ್ ನಲ್ಲಿನ 'ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ "ವೀರ ಮದಕರಿ ನಾಯಕರ ಜನ್ಮದಿನಾಚರಣೆ"ಯಲ್ಲಿ ಅವರು ಮಾತನಾಡುತ್ತಿದ್ದರು.

ಹೈದರ್ ಅಲಿಯ ಮೈಸೂರಿನ ಸೇನೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ನಾಯಕನನ್ನು ಮಾತುಕತೆಗೆಂದು ರಾಜಿ ಸಂಧಾನವೆಂದು ಕರೆಸಿ ಮೋಸದಿಂದ ಹೈದರ್ ಅಲಿ ಬಂಧಿಸಿ, ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟು ಮತಾಂತರವಾದರೆ ರಾಜ್ಯವನ್ನು ವಾಪಸ್ಸು ನೀಡಿ ಬಿಡುಗಡೆ ಮಾಡುವುದಾಗಿ ಹೇಳಲು ಮದಕರಿ ಜೀವ ನೀಡುತ್ತಾನೆ ಹೊರತು ಧರ್ಮದ್ರೋಹ ಮಾಡುವುದಿಲ್ಲ ಎಂದು ಕೆಚ್ಚೆದೆಯಿಂದ ಹೇಳುತ್ತಾನೆ. ನಂತರ ಹೈದರ್ ಅಲಿಯ ಪುತ್ರ ಟಿಪ್ಪುಸುಲ್ತಾನ್ ಮೈಸೂರಿನ ಮತ್ತು ಚಿತ್ರದುರ್ಗದ ಬೇಡರ ಪಡೆಗಳು ಒಂದಾಗಿ ದಾಳಿ ಮಾಡಬಹುದೆಂಬ ಹೆದರಿ ಸೈನಿಕ ದಂಗೆಯಾದರೆ ನಮಗೆ ಸೋಲು ಖಚಿತವೆಂದು ಭಾವಿಸಿ ಯುದ್ಧಭಯದಿಂದ ಮದಕರಿ ಊಟದಲ್ಲಿ ವಿಷವಿಟ್ಟು ಕೊಲೆ ಮಾಡುತ್ತಾನೆ ಎಂದರು. ಮದಕರಿಯ ಆಳ್ವಿಕೆಯಲ್ಲಿದ್ದ ಚಿತ್ರದುರ್ಗದ ಕೋಟೆಯನ್ನು ಹೈದರ್ ಅಲಿಯ ಸೇನೆ ಮುತ್ತಿಗೆ ಹಾಕುತ್ತದೆ. ಹೀಗೆ ಹೈದರ್ ಅಲಿ ಚಿತ್ರದುರ್ಗದ ಕೋಟೆಯನ್ನು ಸುತ್ತುವರಿದಾಗ ಒನಕೆ ಓಬವ್ವ ಬಂಡೆಗಳ ನಡುವಿನ ಕಿಂಡಿಯ ಮೂಲಕ ಪ್ರವೇಶಿಸಿದ್ದನ್ನು ಗುರುತಿಸಿ, ತನ್ನ ಸೈನಿಕರನ್ನು ಆ ಮಾರ್ಗದ ಮೂಲಕ ಕಳುಹಿಸಿರುತ್ತಾನೆ. ಆ ಕಿಂಡಿಯ ಸಮೀಪ ಕಾವಲು ಕಾಯುತ್ತಿದ್ದ ಕೋಟೆಯ ಸೈನಿಕ ಊಟಮಾಡಲು ಮನೆಗೆ ಹೋಗಿರುತ್ತಾನೆ. ಆಕೆ, ಆ ಕಿಂಡಿಯ ಮೂಲಕ ಬರುತ್ತಿದ್ದ ಸೈನಿಕರನ್ನು ಗಮನಿಸುತ್ತಾಳೆ. ಕೂಡಲೇ ಜಾಗೃತಳಾಗಿ ತನ್ನ ಒನಕೆ ಯನ್ನು(ಭತ್ತ ಕುಟ್ಟಲು ಬಳಸುವ ಒಕ್ಕುಗೋಲು) ಬಳಸಿ ಅವರನ್ನು ಕೊಲ್ಲುತ್ತಾಳೆ. ಊಟ ಮುಗಿಸಿ ಹಿಂದಿರುಗಿದ ಬಳಿಕ, ಓಬವ್ವನ ರಕ್ತಸಿಕ್ತಗೊಂಡಿದ್ದ ಒನಕೆಯನ್ನು ನೋಡಿ ಆಕೆಯ ಪತಿಗೆ ಆಘಾತವಾಗುತ್ತದೆ. ಜೊತೆಗೆ ಅವಳಿಂದ ಹತರಾದ ನೂರಾರು ಸೈನಿಕರು ಅವಳೆದುರು ಶವವಾಗಿದ್ದನ್ನು ನೋಡುತ್ತಾನೆ.

ತಣ್ಣೀರು ದೋಣಿಯ ಪಕ್ಕದಲ್ಲಿರುವ ಈ ಕಿಂಡಿಯು ಈ ಕಥೆಯ ಹೆಗ್ಗುರುತಾಗಿ ಈಗಲೂ ಉಳಿದುಕೊಂಡಿದೆ. ತಣ್ಣೀರು ದೋಣಿಯು ಒಂದು ಸಣ್ಣ ನೀರಿನ ಮೂಲವಾಗಿದ್ದು ವರ್ಷಪೂರ್ತಿ ಇಲ್ಲಿನ ನೀರು ತಂಪಾಗಿರುತ್ತದೆ. ಹೈದರ್ ಅಲಿ 1799ರಲ್ಲಿ ಮತ್ತೊಮ್ಮೆ ಆಕ್ರಮಣ ನಡೆಸಿ, ಕೋಟೆಯನ್ನು ತನ್ನ ವಶ ಮಾಡಿಕೊಳ್ಳುತ್ತಾನೆ. ಈ ಸ್ಥಳವು ತನ್ನ ಸುತ್ತಲಿನ ಕಲ್ಲಿನ ಕೋಟೆಗೆ ಪ್ರಸಿದ್ಧವಾಗಿದೆ. ("ಕಲ್ಲಿನ ಕೋಟೆ ಇರುವ ಸ್ಥಳ") ಹಾಗು ಇದು ಏಳು ಸುತ್ತಿನ ಕೋಟೆ ಇರುವ ಸ್ಥಳವಾಗಿದೆ, ಇದು ದೊಡ್ಡ ದೊಡ್ಡ ಬಂಡೆಗಳಿಂದ ನಿರ್ಮಿತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಸ್ಲಾಂ ಶೇಖ್, ಶಿವಯೋಗೆಪ್ಪಾ ಎಸ್. ಬಿರಾದಾರ, ಪೂಜಾ ಹೂಗಾರ, ಸ್ನೇಹಾ ಚೌಹಾಣ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಧನಾತ್ಮಕತೆ ಹೀಗಿರಬೇಕು..!!




ಸಂತೋಷ್ ರಾವ್ ಪೆರ್ಮುಡ

ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ – ದ.ಕ ಜಿಲ್ಲೆ

■ ಉದಯರಶ್ಮಿ ದಿನಪತ್ರಿಕೆ

ಸಕಾರಾತ್ಮಕ ಚಿಂತನೆಯು ಒಬ್ಬ ವ್ಯಕ್ತಿಯ ನಂಬಿಕೆ ಅಥ–'ವಾ ಮಾನಸಿಕ ಮನೋಭಾವದ ದ್ಯೋತಕ. ಒಟ್ಟಾರೆಯಾಗಿ ಈ ರೀತಿಯ ಚಿಂತನೆಯು ಒಳ್ಳೆಯದೇ ಸಂಭವಿಸುತ್ತದೆ ಮತ್ತು ನಮ್ಮ ಪ್ರಯತ್ನಗಳು ಬೇಗನೇ ಅಥವಾ ನಂತರ ಒಳ್ಳೆಯ ಫಲವನ್ನು ನೀಡುತ್ತವೆ ಎಂದು ಯೋಚಿಸುವಂತೆ ಮಾಡುತ್ತದೆ. ಇದು ನಕಾರಾತ್ಮಕ ಚಿಂತನೆಯ ವಿರುದ್ಧವಾಗಿದ್ದು, ಇದು ನಮ್ಮ ಮನಸ್ಸನ್ನು ಒತ್ತಡ ಮತ್ತು ಭಯದಿಂದ ಮುಕ್ತವಾಗಿಸುತ್ತದೆ. ಹೀಗಾಗಿ, ಧನಾತ್ಮಕ ಚಿಂತನೆಯು ವ್ಯಕ್ತಿಯಲ್ಲಿ ಆಶಾವಾದ ಮತ್ತು ಭರವಸೆಯ ಆಲೋಚನೆಗಳನ್ನು ಬಲಪಡಿಸುವುದಲ್ಲದೇ ಯಾರು ಪ್ರತಿಯೊಂದನ್ನೂ ಧನಾತ್ಮಕ ದೃಷ್ಟಿಕೋನದಿಂದ ನೋಡುತ್ತಾನೋ ಆತನು ಬದುಕಿನಲ್ಲಿ ಬರುವ ಹಲವಾರು ಸಮಸ್ಯೆಗಳು ಮತ್ತು ಸವಾಲುಗಳನ್ನು ಸುಲಭವಾಗಿ ಗೆದ್ದು ಬೀಗುತ್ತಾನೆ. ನಮ್ಮ ಸುತ್ತಲೂ ಪ್ರತಿಯೊಂದಕ್ಕೂ ಅಯ್ಯೋ ಹೀಗಾಯ್ತಲ್ಲಾ, ಹೀಗಾಗಬಾರದಿತ್ತು, ಮೊದಲೇ ಚೆನ್ನಾಗಿ–ತ್ತು, ಇಷ್ಟೊಂದು ಕಠಿಣ ಆಗುತ್ತದೆ ಅಂದುಕೊಂಡಿರಲಿಲ್ಲ ಇಂತಹ ನಕಾರಾತ್ಮಕ ಯೋಚನೆಯನ್ನೇ ಮಾಡುವ ಜನರನ್ನು ನೋಡುತ್ತೇವೆ. ಅದೇ ರೀತಿ ಆಗಿದ್ದೆಲ್ಲಾ ಒಳ್ಳೆಯದಕ್ಕೇ, ಇನ್ನೂ ಚೆನ್ನಾಗಿ ಮಾಡುತ್ತೇನೆ, ಇಷ್ಟಕ್ಕೇ ಮುಗಿಯಿತಲ್ಲಾ, ಪರವಾಗಿಲ್ಲ ಚೆನ್ನಾಗಿಯೇ ಆಯಿತು ಎಂದು ಧನಾತ್ಮಕವಾಗಿ ಯೋಚನೆ ಮಾಡುವ ವಿಭಿನ್ನ ಮನೋಭಾವದ ಜನರೂ ನಮ್ಮ ನಡುವೆಯೇ ಇದ್ದಾರೆ. ಇವರಿಬ್ಬರ ನಡುವೆ ಇರುವ ವ್ಯತ್ಯಾಸ ಎಂದರೆ ಅವರು ವಿವಿಧ ಸಂದರ್ಭ ಮತ್ತು ಸನ್ನಿವೇಶವನ್ನು ನೋಡುವ ರೀತಿಯಷ್ಟೇ.

ಇದಕ್ಕೆ ಉತ್ತಮ ಉದಾಹರಣೆ ಎಂದರೆ ಇತ್ತೀಚೆಗಷ್ಟೇ ಮುಕ್ತಾಯಗೊಂಡ ಮಹಿಳೆಯರ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ನಡೆದ ಒಂದು ಕುತೂಹಲಕಾರಿ ಸನ್ನಿವೇಶ. ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಮಹಿಳಾ ಪ್ರೀಮಿಯರ್ ಲೀಗ್‌ನ (ಘಾಟಜಟ್ಟ' ಕಡಿಜಟುಜಡಿ ಐಜಚಿಠಿಣಜ) ಕೊನೆಯ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಟಾಸ್ ಗೆದ್ದ ಯು.ಪಿ ವಾರಿಯರ್ಸ್ ತಂಡ ಮೊದಲು ಬೌಲಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಆರ್.ಸಿ.ಬಿ




ನಿಗದಿತ 20 ಓವರ್‌ಗಳಲ್ಲಿ 198 ರನ್ ಕಲೆಹಾಕಿತು. ಉತ್ತಮವಾಗಿ ಬ್ಯಾಟಿಂಗ್ ಮಾಡಿದ ಎಲ್ಲಿಸ್ ಪರ್ರಿ (ಇಟಟಥಿಜ ಕಜಡಿಡಿಥಿ) 37 ಎಸೆತಗಳಲ್ಲಿ 58 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದರು.

**ಪಂಚ್‌ನ ಗಾಜಿಗೇ ಸ್ಟ್ರೈಕ್ ಮಾಡಿದ ಪರ್ರಿ**

ಮಹಿಳಾ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಆಟಗಾರ್ತಿ ಎಂದು






ಪರಿಗಣಿಸಲ್ಪಟ್ಟಿರುವ ಆಸೀಸ್ ಆಲ್‌ರೌಂಡರ್ ಎಲ್ಲಿಸ್ ಪರ್ರಿ ಈ ಪಂದ್ಯದ 19ನೇ ಓವರ್‌ನಲ್ಲಿ ದೀಪ್ತಿ ಶರ್ಮಾ ವಿರುದ್ಧ ಬಾಲ್ ಒಂದನ್ನು ಪ್ರದರ್ಶನಕ್ಕೆ ಇಟ್ಟಿದ್ದ ಖಿಂಖಿಂ ಕಣಟಿಛಿ (ಜಿತ) ಕಾರ್ ಕಡೆಗೆ ನೇರವಾಗಿ ಟಾಂಕ್ ಮಾಡಿದರು. ಟಿವಿ ಪರದೆಯ ಮೇಲೆ ಕಾರಿನ ಕಿಟಕಿ ಗಾಜನ್ನು ಒಡೆದ ನಂತರ ಚೆಂಡು ಹಿಂದಿನ ಸೀಟಿನಲ್ಲಿ ಲ್ಯಾಂಡ್ ಆಗಿರುವುದನ್ನು ನೋಡಿದ ಪರ್ರಿಯ ಸಿಕ್ಸರ್ ಆರ್.ಸಿ.ಬಿ ಫ್ಯಾನ್ಸ್‌ಳಿಂದ ಭರ್ಜರಿ ಮೆಚ್ಚುಗೆ ಪಡೆಯಿತು. ಡಬ್ಲ್ಯು.ಪಿ.ಎಲ್‌ನಲ್ಲಿ ಸೂಪರ್ ಸ್ಟ್ರೈಕರ್ ಪಡೆಯುವ ಆಟಗಾರ್ತಿಗೆ ಈ ಆವೃತ್ತಿಯಲ್ಲಿ ಟಾಟಾ ಪಂಚ್ ಕಾರನ್ನು ಪ್ರಶಸ್ತಿಯಾಗಿ ನೀಡಲಾಗುತ್ತದೆ. ಹೀಗಾಗಿ ಟಾಟಾ ಪಂಚ್ ಕಂಪನಿಯ ಕಾರೊಂದನ್ನು ಪ್ರದರ್ಶನಕ್ಕಾಗಿ ಪ್ರತಿ ಪಂದ್ಯದಲ್ಲೂ ಇಡಲಾಗುತ್ತದೆ. ಹಾಗೆ ಇಟ್ಟಿದ್ದ ಕಾರಿನ ಡೋರ್ ಗಾಜಿಗೆ ಎಲ್ಲಿಸ್ ಪರ್ರಿ ಬಾರಿಸಿದ ಸಿಕ್ಸರ್ ಬಡಿದಿದ್ದು, ಚೆಂಡು ಬಿದ್ದ ರಭಸಕ್ಕೆ ಗಾಜು ಪೀಸ್ ಪೀಸ್ ಆಗಿದೆ.

ಕಾರಿನ ಗಾಜು ಒಡೆದಿರುವುದನ್ನು ನೋಡಿದ ಪೆರಿಯು ತನ್ನ ತಲೆಯ ಮೇಲೆ ಕೈಹೊತ್ತ ಪ್ರತಿಕ್ರಿಯೆ ಚಿನ್ನದಂತಿತ್ತು. ನಂತರ ಪರ್ರಿಯು 'ನಾನು ಸ್ವಲ್ಪ ಚಿಂತಿತಳಾಗಿದ್ದೇನೆ. ಏಕೆಂದರೆ ಕಾರಿನ ಗಾಜಿನ ಮೊತ್ತವನ್ನು ನಾನು ಪಾವತಿಸಬೇಕೇ ನನಗೆ ತಿಳಿದಿಲ್ಲ. ಅದೇ ರೀತಿ ನನ್ನ ವಿಮೆಯು ಇಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ನಾನು ಭಾವಿಸುವುದಿಲ್ಲ' ಎಂದು ಪೋಸ್ಟ್ ಮ್ಯಾಚ್ ಪ್ರೆಸೆಂಟೇಶನ್‌ನಲ್ಲಿ ಹೇಳಿದ್ದರು. 'ಕಲೆ ಮತ್ತು ಕಲಾವಿದ' ಎಂಬ ಶೀರ್ಷಿಕೆಯೊಂದಿಗೆ ಎಲ್ಲಿಸ್ ಪರ್ರಿ ಗಾಜು ಒಡೆದ ಕಾರಿನ ಮುಂದೆ ನಿಂತಿರುವ ಚಿತ್ರವನ್ನು ಆರ್.ಸಿ.ಬಿ ಪೋಸ್ಟ್ ಮಾಡಿದ್ದು, ಅತ್ಯುತ್ತಮವಾಗಿ ನಡೆಯುತ್ತಿರುವ ಈ ಲೀಗ್‌ನಲ್ಲಿ ಮತ್ತು ಮುಂಬರುವ ಐಪಿಎಲ್ ಪಂದ್ಯಗಳಲ್ಲಿ ಇನ್ನಷ್ಟು ಹೆಚ್ಚು ಕಾರಿನ ಕಿಟಕಿಗಳು ಒಡೆಯಲಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದೆ.

ಒಂದು ರೀತಿಯಲ್ಲಿ ಟಾಟಾ ಕಂಪೆನಿಯ ಬಗೆಗೆ 'ನಿಮ್ಮ ಕಾರ್ ಡ್ಯಾಮೇಜ್ ಆಯಿತು ನೋಡಿ' ಎನ್ನುವ ಭಾವನೆ ವೀಕ್ಷಕರಲ್ಲಿ ಹರಡಿ, ಪ್ರಚಾರಕ್ಕೆಂದು ನಿಲ್ಲಿಸಿದ್ದ ಕಾರಿನ ಬ್ರಾಂಡ್‌ಗೆ ಋಣಾತ್ಮಕ ಎಫೆಕ್ಟ್ ಬಂದಿತ್ತು! ಆದರೆ ಇದರಿಂದ ವಿಚಲಿತರಾಗದೇ ಸ್ಮಾರ್ಟ್ ಆಗಿ ಯೋಚಿಸಿದ ಟಾಟಾ ಕಂಪನಿಯ ಎಫ್.ಸಿ.ಬಿ ಕಿನೆಕ್ಟ್ ರಾಷ್ಟ್ರೀಯ ಸೃಜನಾತ್ಮಕ ನಿರ್ದೇಶಕ ಕಾರ್ತಿಕೇಯ ತಿವಾರಿ ಇವರು ಆ ಕಾ–ರಿನ ಕಿಟಕಿಯ ಒಡೆದು ಹೋದ ಚೂರುಗಳನ್ನು ಸಂಗ್ರಹಿಸಿ ಒಂದು ಫ್ರೇಮ್‌ನಲ್ಲಿ ಜೋಡಿಸಿ ಸುಂದರ ಸ್ಮರಣಿಕೆಯನ್ನಾಗಿ ತಯಾರಿಸಿ ಕಾರಿನ ಗಾಜನ್ನು ಒಡೆದ ಅದೇ ಹುಡುಗಿಗೆ ಫೈನಲ್ ಪಂದ್ಯದಲ್ಲಿನ ಶ್ರೇಷ್ಠ ಪ್ರದರ್ಶನಕ್ಕೆ ಪ್ರಶಸ್ತಿಯಾಗಿ ಕೊಡಿಸಿದರು. ತಿವಾರಿ ಅವರ ಈ ಸೃಜನಶೀಲ ನಡೆ ಮತ್ತು ನಿರ್ಧಾರವು ಕಾರಿನ ಬ್ರಾಂಡ್ ಮೇಲೆ ಬಂದಿದ್ದ ಋಣಾತ್ಮಕ ಎಫೆಕ್ಟನ್ನು ಪೂರ್ತಿಯಾಗಿ ತೊಡೆದುಹಾಕಿ ಕಂಪನಿಗೆ ಮತ್ತಷ್ಟು ಹೆಚ್ಚಿನ ಧನಾತ್ಮಕ ಪ್ರಚಾರವನ್ನು ಗಳಿಸಿಕೊಟ್ಟಿತು. 'ನೆಗೆಟೀವ್ ಆಗಿದ್ದನ್ನು ಪಾಸಿಟಿವ್ ಆಗಿ ಬದಲಾಯಿಸುವ ಜಾಣ್ಮೆಯಲ್ಲಿ ಜೀವನದ ಖುಷಿ ಅಡಗಿದೆ' ಎನ್ನುವುದನ್ನು ಟಾಟಾ ಕಂಪನಿಯು ಮತ್ತೊಮ್ಮೆ ಸಾಬೀತು ಮಾಡಿತು! ಈ ಸ್ಮರಣಿಕೆಗೆ ತಿವಾರಿ ಅವರು ನೀಡಿದ ಹೆಸರು 'ಪರ್ರಿ ಪವರ್ ಫುಲ್ ಪಂಚ್!'

4 ಮಾರ್ಚ್ 2024 ರಂದು ಪರ್ರಿ ಬಾರಿಸಿದ ಸಿಕ್ಸರ್ ಕಾ–ರಿನ ಗಾಜಿನ ಕಿಟಕಿಯನ್ನು ಒಡೆಯಿತು. ಈಅಃ ಏಟಿಟಿಜಛಿಣ & ಖಿಚಿಣಚಿ.ಜತ ಸಂಸ್ಥೆಯು ಇದೇ ಆಟಗಾರ್ತಿಗೆ ಖಿಂಖಿಂ ಕಣಟಿಛಿ ಜತ ಕಾರಿನ ಕಿಟಕಿಯ ಒಡೆದ ಗಾಜಿನ ಚೂರುಗಳನ್ನು ಸೃಜನಾತ್ಮಕವಾಗಿ ಜೋಡಿಸಿ 'ಪೆರ್ರಿ ಪವರ್‌ಫುಲ್ ಪಂಚ್' ಎನ್ನುವ ವಿಶಿಷ್ಟ ಸ್ಮರಣಿಕೆಯನ್ನು ನೀಡುವ ಮೂಲಕ ಈ ಕ್ಷಣವನ್ನು ಸ್ಮರಣೀಯ ವಿಜಯವನ್ನಾಗಿ ಮಾಡಿತು. ಈ ಸ್ಮರಣಿಕೆಯು ಪೆರ್ರಿ ಕಾರಿನ ಗಾಜನ್ನು ಒಡೆದ ದಿನಾಂಕವನ್ನು ಒಳಗೊಂಡಿದ್ದು, ಪರ್ರಿ ಒಡೆದ ಕಾರಿನ ಕಿಟಕಿಯ ಒಡೆದ ಗಾಜುಗಳನ್ನು ಅತ್ಯಂತ ನಾಜೂಕು ಮತ್ತು ಕಲಾತ್ಮಕವಾಗಿ ಜೋಡಿಸಿ ಅದಕ್ಕೆ ಚೌಕಟ್ಟನ್ನು ಹಾಕಿ ಈ ಪ್ರಶಸ್ತಿಯನ್ನು ರಚಿಸಲಾಗಿದೆ.



ಈ ಸ್ಮರಣಿಕೆಯನ್ನು ನೀಡಿದ ಉದ್ದೇಶ, ಸಾಧನೆಯ ಹಸಿವು ಇರುವ ಮತ್ತು ಪ್ರತಿಭಾವಂತ ಮಹಿಳಾ ಆಟಗಾರ್ತಿಯರು ಸಾಧನೆಯ ಕಡೆಗೆ ಸಾಗಲು ಇರುವ ಹಲವು ಅಡೆತಡೆಗಳನ್ನು ಮು–ರಿಯುವ ಮತ್ತು ಸಾಧನೆಯ ಸಂಭ್ರಮವನ್ನು ಆಚ–ರಿಸುವುದನ್ನು ಸಂಕೇತಿಸುತ್ತದೆ ಎಂದು ಟಾಟಾ ಕಂಪನಿಯು ಹೇಳಿಕೊಂಡಿದೆ. ಮಹಿಳಾ ಪ್ರೀಮಿಯರ್ ಲೀಗ್ ಈ ದಿನ ಮಹಿಳಾ ಕ್ರಿಕೆಟ್ ಜಗತ್ತಿನಲ್ಲಿ ಹಲವಾರು ಪೂರ್ವಾಗ್ರಹಗಳನ್ನು ಛಿದ್ರಗೊಳಿಸುವಲ್ಲಿ ಹೊಸ ಆಯಾಮವನ್ನು ತಲುಪಿದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಎಲ್ಲಿಸ್ ಪರ್ರಿ ಕ್ರೀಡೆಯಲ್ಲಿ ಮಹಿಳೆಯರ ಸಾಧನೆಯ ಬಗೆಗೆ ಅಚ್ಚಳಿಯದ ಹೆಜ್ಜೆಗುರುತನ್ನು ಮೂಡಿಸಿದ್ದಾರೆ ಅಷ್ಟೇ ಅಲ್ಲದೇ ಲೀಗಿನ ಶೀರ್ಷಿಕೆ ಪ್ರಾಯೋಜಕರ ಡಿಸ್ಪ್ಲೆ ಕಾರ್, ಖಿಂಖಿಂ.ಜತನ ಕಿಟಕಿಯನ್ನೂ ಸಹ ಛಿದ್ರಗೊಳಿಸಿದರು ಎಂದು ಮಾರ್ಮಿಕವಾಗಿ ಘೋಷಿಸುವ ಮೂಲಕ ಮಹಿಳಾ ಸಾಧಕಿಯರನ್ನು ಬೆಂಬಲಿಸುವುದಾಗಿ ಟಾಟಾ ಇವಿ ಕಂಪೆನಿ ಘೋಷಿಸಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ 'ಪ್ರತಿಯೊಂದು ಮಗುವೂ ಬೀದಿಗಳಲ್ಲಿ ಕ್ರಿಕೆಟ್ ಆಡುವ ಮತ್ತು ರಸ್ತೆಯಲ್ಲಿ ನಿಲ್ಲಿಸಿರುವ ಕಾರುಗಳನ್ನು ದೂಡುವ ಕನಸುಗಳನ್ನು ಕಾಣುತ್ತವೆ. ಆದರೆ ಅದನ್ನು ನನಸಾಗಿಸುವ ಧೈರ್ಯವನ್ನು ಮಾಡುವುದಿಲ್ಲ, ಆದರೆ ನೀವು ಅದನ್ನು ಇಂದು ಮಾಡಿದ್ದೀರಿ. ನಿಲ್ಲಿಸಿದ್ದ ಆ ಡಿಸ್ಪ್ಲೆ ಕಾರಿನ ಗಾಜನ್ನು ಮುರಿಯುವುದು ಕೇವಲ ದವಡೆಯನ್ನು ಮುರಿಯುವ ಕ್ಷಣವಷ್ಟೇ ಆಗಿರಲಿಲ್ಲ, ಬದಲಿಗೆ ಪ್ರತಿಯೊಬ್ಬ ಕ್ರಿಕೆಟ್ ಪ್ರೇಮಿಯ ಹೃದಯದಲ್ಲಿ ಅಡಗಿರುವ ಚೇಷ್ಟೆಯ ಮನೋಭಾವದ ಸಂತೋಷಕ್ಕೆ ಇದು ಸಿಕ್ಕಿದ ಸವಿಯಾದ ನಮನ. #ಖಿಂಖಿಂಫಕಐ 2024 ರ ಕಾರಿನ ಕಿಟಕಿ ಮುರಿದ ಯೋಧ ನಿಮಗೆ ಚೀರ್ಸ್!' ಎಂದು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಟಾಟಾ ಮೋಟಾರ್ಸ್ ಬರೆದುಕೊಂಡಿದೆ.

ಈ ಬಾರಿಯ ಮಹಿಳಾ ಪ್ರೀಮಿಯರ್ ಲೀಗಿನ ಸರಣಿಯಿಡೀ ಅದ್ಭುತವಾಗಿ ಆಡಿದ ಆಟಗಾರ್ತಿಯ ಹೆಸರು 'ಎಲ್ಲಿಸ್ ಪರ್ರಿ' ಕೂಡಾ ಈ ಸ್ಮರಣಿಕೆಯ ಶೀರ್ಷಿಕೆಯಲ್ಲಿ ಬಂದಿದ್ದು, ಪಂದ್ಯಾವಳಿಯಲ್ಲಿ ನಡೆದ ರೋಚಕ ಘಟನೆಯನ್ನು ವಿವರಣೆ ಮಾಡಬಹುದಾದ ಪದಗಳನ್ನೂ ಅರ್ಥವತ್ತಾಗಿ ಇಲ್ಲಿ ಬಳಸಿಕೊಂಡು 'ಪಂಚ್' ಎಂಬ ಕಾರಿನ ಹೆಸರನ್ನೂ 'ಹೆಚ್ಚು ಪವರ್ ಫುಲ್' ಎಂಬಂತೆ ಧನಾತ್ಮಕವಾಗಿ ಪ್ರಚಾರ ಮಾಡುವ ಮೂಲಕ ಸೃಜನಶೀಲತೆಯನ್ನು ಪ್ರದರ್ಶಿಸಿತು. ಕಾರ್ತಿಕೇಯ ತಿವಾರಿ ಅವರು 'ಸಮಕಾಲೀನ ಬ್ರಾಂಡ್‌ಗಳನ್ನು ಯೋಜಿತ ಕ್ಷಣಗಳಲ್ಲಿ ನಿರ್ಮಿಸಲಾಗಿದ್ದು, ಈ ಲೀಗ್ ಕೇವಲ ಕ್ರಿಕೆಟ್ ಪಂದ್ಯಾವಳಿಯಷ್ಟೇ ಆಗಿರದೇ ಇದು ಸಂದರ್ಭಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸುವ ಮತ್ತು ಅಗಾಧ ಪ್ರತಿಭೆಯ ಅನಾವರಣದ ಸಂಭ್ರಮವೂ ಆಗಿದೆ. ಈ ಘಟನೆಯು ಭಾರತದಲ್ಲಿ ಮಹಿಳೆಯರು ಹೇಗೆ ಗಾಜಿನ ಒಳ ಛಾವಣಿಯನ್ನು ನುಚ್ಚುನೂರು ಮಾಡುತ್ತಾರೆ ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಆಗಿದೆ. ಈ ಒಂದು ಅದ್ಭುತ ಹಾಗೂ ನೈಜ ಕ್ಷಣವನ್ನು ಧನಾತ್ಮಕವಾಗಿ ಪರಿಗಣಿಸಿ ಮತ್ತು ಈ ವಿಜಯವನ್ನು ಅಮರಗೊಳಿಸಿ ಪರ್ರಿ ಅವರಿಗೆ ಹೂಗುಚ್ಛವನ್ನು ನೀಡುವ ಮೂಲಕ ಅಭಿನಂದನೆ ಸಲ್ಲಿಸಲು ಬಯಸುತ್ತೇವೆ ಎಂದು ಹೇಳಿದ್ದಾರೆ. ಪ್ರತಿಯೊಂದು ವಿಚಾರದಲ್ಲೂ ಕೇವಲ ಋಣಾತ್ಮಕ ಧೋರಣೆಯನ್ನೇ ತೋರುವ ವ್ಯವಸ್ಥೆಯ ನಡುವೆ ಧನಾತ್ಮಕತೆ ಎಂದರೆ ಇದೇ ಅಲ್ಲವೇ?

## ಗುಡಿ ಹಾಗೂ ಅತಿಸಣ್ಣ ಕೈಗಾರಿಕೆ ಸ್ಥಾಪನೆಗೆ; ಸಬ್ಸಿಡಿ ಸಹಾಯಧನಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ಗುಡಿ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಇಚ್ಛಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹರಿಗೆ ಶೇ. 60ರಷ್ಟು ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವಿಜಯಪುರ ನಗರದ ಶಿಕಾರಖಾನೆ, ಸ್ಟೇಷನ್ ಬ್ಯಾಕ್ ರೋಡ್‌ನಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಅ.31ರೊಳಗೆ ಸಲ್ಲಿಸಬೇಕು.ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9972650137 ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಪ್ರಕಟಣೆ ತಿಳಿಸಿದೆ.



## ಮಾಹಿತಿ ಹಕ್ಕು ಕಾಯ್ದೆ ಆಶಯದಂತೆ ಆಯೋಗ ಕೆಲಸ : ಬಿ. ವೆಂಕಟ ಸಿಂಗ್

ಕಲ್ಬುರ್ಗಿ: ಮಾಹಿತಿ ಹಕ್ಕು ಕಾಯ್ದೆಯ ಆಶಯದಂತೆ ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಆಯೋಗ ತಂಡವಾಗಿ ಕೆಲಸ ಮಾಡುತ್ತಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟ ಸಿಂಗ್ ಅವರು ಹೇಳಿದರು.

ಸೋಮವಾರ ಸಂಜೆ ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದಲ್ಲಿ ಆಯೋಜಿಸಿದ ಮಾಹಿತಿ ಹಕ್ಕು ಕಾಯ್ದೆ ದಿನಾಚರಣೆಯಲ್ಲಿ ಮಾತನಾಡಿದ ಅವರು ಮಾಹಿತಿ ಹಕ್ಕು ಕಾಯ್ದೆ ಆಡಳಿತದಲ್ಲಿ ಜನ ಸಾಮಾನ್ಯರಿಗೆ ಸಹಭಾಗಿ–ತ್ವ ನೀಡುವ ಕಾಯ್ದೆಯಾಗಿದೆ, ಆಡಳಿತದಲ್ಲಿ ಪಾರದರ್ಶಕತೆ, ಭ್ರಷ್ಟಚಾರ ನಿಯಂತ್ರಣ ಕಾಯ್ದುಕೊಳ್ಳುವುದರ ಮೇಲೆ ನಾಗರಿಕ ನಿಗಾ ಇಡಲು ಪೂರಕವಾಗಿದೆ ಎಂದು ಹೇಳಿದರು.

ಅಕ್ಟೋಬರ್–12, 2005 ರಲ್ಲಿ ಈ ಕಾಯ್ದೆ ದೇಶದಲ್ಲಿ ಜಾರಿಗೆ ಬಂದ ಬಳಿಕ ಆಡಳಿತದಲ್ಲಿ ಸುಧಾರಣೆ ತಂದು ಅಧಿಕಾರಿಗಳನ್ನು ಉತ್ತರದಾಯಿಗಳನ್ನಾಗಿ ಮಾಡುವಲ್ಲಿ ಕಾಯ್ದೆ ಕೆಲಸ ಮಾಡಿದೆ, ಆದರೂ ಸರ್ಕಾರಿ ಅಧಿಕಾ–ರಿಗಳು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿ ಬೇಕಾಗಿದೆ. ಎಂದು ಸೂಚನೆ ನೀಡಿದರು.

ಕಲ್ಬುರ್ಗಿ ಪೀಠದಲ್ಲಿ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ತ್ವರಿತಗತಿಯಲ್ಲಿ ನಡೆಯುತ್ತಿದೆ ಮಾಹಿತಿ ಹಕ್ಕು ಕಾಯ್ದೆಯ ಆಶಯದ ಪೂರಕವಾಗಿ ಆಯೋಗದ ಎಲ್ಲಾ ಅಧಿಕಾರಿಗಳು ಒಂದು ತಂಡವಾಗಿ ಕೆಲಸ ನಿರ್ವಹಿಸುತ್ತಿದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜನರಿಗೆ ಕಾಯ್ದೆ ಲಾಭಪಡೆಯಲು ಅನುಕೂಲವಾಗುವಂತೆ ಕಾರ್ಯಪ್ರವೃತ್ತರಾಗಬೇಕು ಎಂದು ಸಲಹೆ ಮಾಡಿದರು.

ಆರಂಭದಲ್ಲಿ ಪೀಠದ ಕಾನೂನು ಸಹಾಯಕಿ ಪೂಜಾ ಆರ್. ಪ್ರಸ್ತಾವಿಕ ಮಾತನಾಡಿದರು. ಕೊನೆಯಲ್ಲಿ ಶಾಖಾಧಿಕಾರಿ ಶಿವಕುಮಾರ ವಂದಿಸಿದರು ಈ ವೇಳೆ ಪೀಠದ ಸಿಬ್ಬಂದಿ ಹಾಜರಿದ್ದರು.

## ಸೂಗೂರಿನಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಬ್ರಹ್ಮೋತ್ಸವ

ಕಾಳಗಿ : ತಾಲೂಕಿನ ಸೂಗೂರ ಗ್ರಾಮದ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಬ್ರಹ್ಮೋತ್ಸವ ಅ. 15ರಿಂದ 23ರಂದು ರವರೆಗೆ ನಡೆಯಲಿದೆ ಎಂದು ದೇವಸ್ಥಾನದ ಸಂಚಾಲಕರಾದ ಶ್ರೀ ಸನ್ನತದಾಸ ಮಹಾರಾಜ ಹೇಳಿದರು.

ತಾಲೂಕಿನ ಸೂಗೂರು (ಕೆ) ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅ.15ರಂದು ಬೆಳಗ್ಗೆ 9ಕ್ಕೆ ಅಂಕುರಾರ್ಪಣೆ, ಧ್ವಜಾರೋಹಣ ಹೋಮ, ಸಂಜೆ 7ಕ್ಕೆ ಗರುಡ ವಾಹನ, ಅ.16 ರಂದು ಬೆಳಗ್ಗೆ ಹೋಮ, ಕಲ್ಪವೃಕ್ಷ ವಾಹನ, ಸಂಜೆ ಶೇಷ ವಾಹನ, ಅ. 17ರಂದು ಬೆಳಗ್ಗೆ 11ಕ್ಕೆ ಶ್ರೀನಿವಾಸ ಕಲ್ಯಾಣೋತ್ಸವ, ಸಂಜೆ 7ಕ್ಕೆ ಹನುಮಾನ ವಾಹನೋತ್ಸವ ನಡೆಯಲಿದೆ.

ಅ.18ರಂದು ಬೆಳಗ್ಗೆ 9ಕ್ಕೆ ತುಳಸಿ ಅರ್ಚನಾ, ಸಂಜೆ 7ಕ್ಕೆ ಸಿಂಹ ವಾಹನ, ಅ.19 ರಂದು ಬೆಳಗ್ಗೆ 9ರಿಂದ ಸೂರ್ಯಪ್ರಭ ವಾಹನ, ಸಂಜೆ 7ಕ್ಕೆ ಚಂದ್ರಪ್ರಭ ವಾಹನ, ಸಂಜೆ 7ಕ್ಕೆ ಪುಷ್ಪೋತ್ಸವ ನಡೆಯಲಿದೆ. ಅ.20 ರಂದು ಬೆಳಗ್ಗೆ 8ಕ್ಕೆ ತುಳಸಿ

ಅರ್ಚನಾ, ಸಂಜೆ 5ಕ್ಕೆ ಅಶ್ವವಾಹನ, ಶ್ರೀ ಬನ್ನಿ ಪೂಜೆ ನಡೆಯಲಿದೆ. ಅ.21ರಂದು ಬೆಳಗ್ಗೆ 6ಕ್ಕೆ ಹಂಸ ವಾಹನ, ಅ.22 ರಂದು ಬೆಳಗ್ಗೆ 6ಕ್ಕೆ ಗಜ ವಾಹನ ಉತ್ಸವ, ಪರಿಕ್ರಮ ಉತ್ಸವ ನಡೆಯಲಿದೆ. ಮಧ್ಯಾಹ್ನ 3ಕುಸ್ತಿಗಳು ನಡೆಯಲಿವೆ ಎಂದರು.



ಅ. 23 ರಂದು ಬೆಳಗ್ಗೆ 6ಕ್ಕೆ ಮಹಾ ಅಭಿಷೇಕ ಪೂಜೆ, ಬೆಳಗ್ಗೆ 9ಕ್ಕೆ ಪಲ್ಲಕ್ಕಿ ಉತ್ಸವ, ಚಕ್ರ ಸ್ನಾನ ನಡೆಯಲಿದೆ.

ಅ. 21ರಂದು ರಾತ್ರಿ 9 ರಿಂದ ಬೆಳಗ್ಗೆ 5ರವರೆಗೆ ನಗೆ ಹಬ್ಬ, ಸಂಗೀತ ರಸಮ–ಂಜರಿ, ಪ್ರತಿಭಾವಂತರಿಗೆ ಸನ್ಮಾನ, ಭರತನಾಟ್ಯ, ಭಜನೆ ಸೇರಿ ಭಿನ್ನ ವಿಭಿನ್ನ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿವೆ ಎಂದರು.

ಈ ಸಂದರ್ಭದಲ್ಲಿ ಅರಣಕುಮಾರ ಪಾಟೀಲ, ಉಮಾಕಾಂತ ರೇಮಣಿ, ಸಿದ್ದು ಕೇಶ್ವರ, ವಿರೇಶ ಸಿಂಗಶೆಟ್ಟಿ, ಜಗನ್ನಾಥ ಕೊಳ್ಳಿ, ಭೀಮ ಶಾ ಅಂಕನ, ಸಂಜುಕುಮಾರ ಕಾರಬಾರಿ, ನರಸಿಂಗ ಚೌವ್ಹಾಣ, ಅಣ್ಣರಾವ ಗಡ್ಡಿ, ಸಿದ್ದಯ್ಯ ಗುತ್ತೇದಾರ, ಶರಣು ಗಾರಂಪಳ್ಳಿ, ಖಿತಲಯ್ಯ ಗುತ್ತೇದಾರ, ದತ್ತಾತ್ರೇಯ ಮುಚ್ಚೆಟ್ಟಿ, ಉಮಾಕಾಂತ ಪೂಜಾರಿ, ಶಾಮರಾವ ಒಡೆಯರಾಜ, ಬಸವರಾಜ ಪೂಜಾರಿ, ಬಾಬುರಾವ ಕುಂಬಾರ, ದಾವೂದ್ ಮೌಜಾನ್, ಮೈನೋದಿನ ಸುಲೇಪೇಟ, ಗಣೇಶ ಕೋಟಿ ಸೇರಿದಂತೆ ಅನೇಕರಿದ್ದರು.

ವಿಸ್ಮಯ ಭತ್ತದ ಬೆಳೆ ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿನ ಸೂಗೂರ (ಕೆ) ಗ್ರಾಮದಲ್ಲಿ ಒಂದು ವಿಸ್ಮಯ ಭತ್ತದ ಬೆಳೆ 200 ಅಡಿ ಉದ್ದ 70 ಅಡಿಯಲ್ಲಿ ಬೀಜ ಬಿತ್ತದೆ ಮತ್ತು ಉಳುಮೆ ಮಾಡದೆ ಆಶ್ಚರ್ಯಕರ ರೀತಿಯಲ್ಲಿ ಭತ್ತ ಬೆಳೆಯುತ್ತದೆ. ನಮ್ಮ ಪೂರ್ವಜನರು ಹೇಳುವ ಪ್ರಕಾರ ಈ ಸ್ಥಳದಲ್ಲಿ ಋಷಿಮುನಿಗಳು ಅನುಷ್ಠಾನ ಮಾಡಿ ಅವರ ಭೋಜನಕ್ಕಾಗಿ ಬೆಳೆದ ಬೆಳೆಯಂದು ಹೇಳಲಾಗುತ್ತದೆ. ಹಾಗೂ ಈ ಬೆಳೆಯಿಂದ ಬಂದ ಭತ್ತವನ್ನು ಮೊದಲು ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ ನೈವೇದ್ಯ ರೂಪದಲ್ಲಿ ಅರ್ಪಿಸಿ ನಂತರ ಎಲ್ಲಾ ಸಾದು ಸಂತರು ಸೇವಿಸುತ್ತಿದ್ದರೆಂಬ ಪ್ರತೀತ ಇದೆ. ಈ ಭತ್ತದ ಬೆಳೆಯ ವಿಶೇಷತೆ ಏನಂದರೆ ಇದೆ ಬೀಜವನ್ನು ಬೇರೆಡೆ ಎಲ್ಲೇ ಬಿತ್ತಿದರು ನಾಟುವುದ್ದಿಲ.

ಈ ಬೆಳೆಯನ್ನು ವೀಕ್ಷಿಸಬೇಕಾದರೆ ಜೂನ್ ತಿಂಗಳಿಂದ ಅಕ್ಟೊಬರ್ ತಿಂಗಳವರೆಗೆ ಸಾಧ್ಯ.

## ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ:ಮತ ಎಣಿಕೆ ಅಧಿಕಾರಿ–ಸಿಬ್ಬಂದಿಗೆ ತರಬೇತಿ ಆಯೋಜನೆ

ಕಲಬುರಗಿ: ಕರ್ನಾಟಕ ವಿಧಾನ ಪರಿಷತ್ತಿಗೆ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಒಂದು ಸ್ಥಾನ ಆಯ್ಕೆಗೆ ಇದೇ ಅಕ್ಟೋಬರ್ 23 ರಂದು ಚುನಾವಣೆ ನಡೆದು ಅ.27ಕ್ಕೆ ಮತ ಎಣಿಕೆ ನಡೆಯಲಿರುವ ಕಾರಣ ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮತ ಎಣಿಕೆ ಅಧಿಕಾರಿ, ಮೇಲ್ವಿಚಾರಕರು ಹಾಗೂ ಸಿಬ್ಬಂದಿಯನ್ನು ವರ್ಗದವರಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿ–ತ್ತು. ಕ್ಷೇತ್ರದ ಚುನಾವಣಾಧಿಕಾರಿಯಾಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಅವರ ಅಧ್ಯಕ್ಷತೆಯಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಮಾಸ್ಟರ್ ಟ್ರೇನರ್ ಡಾ.ಮಹಾಂತೇಶ ಸ್ವಾಮಿ ಅವರು ಮತ ಎಣಿಕೆ ಜವಾಬ್ದಾರಿ ವಹಿಸಿಕೊಂಡ ಅಧಿಕಾರಿ ಸಿಬ್ಬಂದಿಗಳಿಗೆ ಅವರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಮತ ಎಣಿಕೆಯು ಪ್ರಕ್ರಿಯೆಯು ಪಾರದರ್ಶಕವಾಗಿ, ನಿಷ್ಪಕ್ಷಪಾತವಾಗಿ ನಡೆಸಬೇಕು.



ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಪಾಲಿಸಬೇಕು. ಏನೇ ಗೊಂದಲಗಳಿದಲ್ಲಿ ಚುನಾವಣಾಧಿಕಾ–ರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳವೇಕೆಂದು ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ತಿಳಿಸಿದರು. ಈ ಸಂದರ್ಭದಲ್ಲಿ ಸಹಾಯಕ ಚುನಾವಣಾಧಿಕಾ–ರಿಯಾಗಿರುವ ಕಲಬುರಗಿ ಜಿಲ್ಲಾಧಿಕಾರಿ ಇಕ್ರಂ ಶರೀಫ್, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾಗಿರುವ ಪ್ರಮೀಳಾ ಎಂ.ಕೆ., ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತರಾದ ರಿತಿಕಾ ವರ್ಮಾ ಇದ್ದರು.

## ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸಲು 'ಹೊಸ ದಿಗಂತ' ಕಾರ್ಯಕ್ರಮ

ಕಲಬುರಗಿ: ಫರಹತಾಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ 'ಹೊಸ ದಿಗಂತ ಪದವಿ ಶಿಕ್ಷಣಕ್ಕೆ ಆತ್ಮವಿಶ್ವಾಸದ ಆರಂಭ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜೇವರ್ಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ. ಶಿವಕುಮಾರ ಅವರು ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯದ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿಗಳು ತಮ್ಮಲ್ಲಿ ನಾಯಕತ್ವದ ಗುಣ, ಸ್ಪರ್ಧಾತ್ಮಕ ಮನೋಭಾವ, ಕ್ರಮಬದ್ಧ ಓದುವ ಅಭ್ಯಾಸ ಹಾಗೂ ಸಮಯಪಾಲನೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ತಮ್ಮ ಜೀವನದ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಸಾಧನೆಯ ಹಾದಿಯಲ್ಲಿ ಮುನ್ನಡೆಯಲು ಪ್ರೇರಣೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಲಬುರಗಿಯ ಸರ್ಕಾರಿ ಸ್ವಾಯತ್ತ ಕಾಲೇಜಿನ ಡಾ. ಪ್ರಕಾಶ ತಳವಾರ ಅವರು ಇಂಗ್ಲಿಷ್ ಭಾಷೆಯ ಮಹತ್ವ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಹಾಗೂ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ಸು ಸಾಧಿಸಲು ಅಗತ್ಯವಿರುವ ಕೌಶಲಗಳ ಕುರಿತು ಮಾತನಾಡಿದರು. ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಮುನ್ನಡೆದು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕು ಎಂದು ಹೇಳಿದರು. ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶದ (ಐಕ್ಯೂಎಸಿ) ಸಂಯೋಜಕ ಡಾ. ಟಿ. ಅಡಿವೇಶ ಅವರು ವಿದ್ಯಾರ್ಥಿಗಳಿಗೆ ಮನರಂಜನೆಯೊಂದಿಗೆ ಪ್ರೊತ್ಸಾಹದಾಯಕ ಮಾತುಗಳನ್ನು ತಿಳಿಸಿ, ಉನ್ನತ ಶಿಕ್ಷಣದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

# ಶಾಸಕ ಬಸನಗೌಡ ಸಿಎಂ ಆಗಲೆಂದು ಬಾಲಕರಿಂದ ಸೈಕಲ್ ಯಾತ್ರೆ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಾಡಿನ ಅಭಿವೃದ್ಧಿ ಹಾಗೂ ಹಿಂದುತ್ವ, ಹಿಂದೂಗಳ ಹಿತದೃಷ್ಟಿಯಿಂದ ಹಿಂದೂ ಫೈಯರ್ ಬ್ರ್ಯಾಂಡ್ ಶಾಸಕ ಬಸನಗೌಡ ರಾ.ಪಾಟೀಲ ಯತ್ನಾಳ ಅವರು, 2028ಕ್ಕೆ ಕರ್ನಾಟಕದ ಮುಖ್ಯಮಂತ್ರಿಯಾಗಲಿ ಎಂಬ ಆಶಯದೊಂದಿಗೆ, ಹುಮನಾಬಾದ್ ದಿಂದ ಸೈಕಲ್ ಯಾತ್ರೆ ಮೂಲಕ ವಿಜಯಪುರ ನಗರಕ್ಕೆ ಆಗಮಿಸಿದ ಪುಟ್ಟ ಹಿಂದೂ ಬಾಲಕರನ್ನು ಸಿದ್ಧಸಿರಿ ಮಲ್ಟಿ–ಸ್ಟೇಟ್ ಮಲ್ಟಿ–ಪರ್ಪಸ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ರಾಮನಗೌಡ ಪಾಟೀಲ ಯತ್ನಾಳ ರವರು ಆರಾಧ್ಯ ದೈವ ಶ್ರೀ ಸಿದ್ದೇಶ್ವರ ದೇವಸ್ಥಾನದ ಎದುರು ಗುರುವಾರ ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಿ ದೇಣಿಗೆ ನೀಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಕಿರಣ ಪಾಟೀಲ, ಮುಖಂಡರಾದ ಪ್ರವೀಣ ವಂದಾಲಮಠ, ಮನೋಜ ಸುರಪುರ, ಆಕಾಶ ಬಿರಾದಾರ, ಸಂದೀಪ ಪಂಗಡವಾಲೆ, ಶ್ರೀಧರ ಮಹೇಂದ್ರಕರ, ವಿಶಾಲ ಧಾರವಾಡಕರ, ಸಾಗರ ಇಂಚಗೇರಿ ಉಪಸ್ಥಿತರಿದ್ದರು.

# ಉಪ ವಿಭಾಗಾಧಿಕಾರಿ ಹುದ್ದೆಗೆ ಬಡ್ತಿ ಪಡೆದ ಸಿದ್ಧರಾಯಗೆ ಸನ್ಮಾನ




■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಥಣಿ ತಾಲೂಕು ಘಟಕದ ವತಿಯಿಂದ ಅಥಣಿ ತಹಸೀಲ್ದಾರ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಸಿದ್ಧರಾಯ ಭೋಸಗಿ (ಕೆಎಎಸ್) ಅವರು ಉಪ ವಿಭಾಗಾಧಿಕಾರಿ (ಎಸಿ) ಹುದ್ದೆಗೆ ಬಡ್ತಿ ಪಡೆದ ಹಿನ್ನೆಲೆಯಲ್ಲಿ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಸಿದ್ಧರಾಯ ಭೋಸಗಿ ಅವರಿಗೆ ಅಭಿನಂದನೆ ಸಲ್ಲಿಸಿ, ಉಪ ವಿಭಾಗಾಧಿಕಾರಿ ಹುದ್ದೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಶುಭ ಹಾರೈಸಿದರು. ಬಳಿಕ ಶಿಕ್ಷಕರ ವಿವಿಧ ಸಮಸ್ಯೆಗಳು ಹಾಗೂ ಬೇಡಿಕೆಗಳ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಲಾಯಿತು. ಶಿಕ್ಷಕರ ವೇತನ, ಸೇವಾ ಸೌಲಭ್ಯಗಳು, ಆಡಳಿತಾತ್ಮಕ ಸಮಸ್ಯೆಗಳು ಸೇರಿದಂತೆ ಹಲವು ವಿಷಯಗಳನ್ನು ಸಂಘದ ಪದಾಧಿಕಾರಿಗಳು ತಹಸೀಲ್ದಾರರ ಗಮನಕ್ಕೆ ತಂದರು. ಸಮಸ್ಯೆಗಳನ್ನು ಆಲಿಸಿದ ಸಿದ್ಧರಾಯ ಭೋಸಗಿ ಅವರು, ಶಿಕ್ಷಕರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಥಣಿ ತಾಲೂಕು ಘಟಕದ ಅಧ್ಯಕ್ಷ ಪಿ ಜಿ ಮಾಳಿ ಪ್ರಧಾನ ಕಾರ್ಯದರ್ಶಿ ಬಿ ಎಸ್ ಗುರವ ಖಜಾಂಚಿ ರವಿ ಹಳ್ಳೊಳ್ಳಿ ನಿರ್ದೇಶಕರಾದ ಎಂ ಬಿ ಅಸ್ಕಿ ರಮಜಾನ್ ಸನದಿ ಎಸ್ ಎಸ್ ಮುಗಳಖೋಡ ಕಾಡಪ್ಪ ಬೆಳಗಲಿ ವಂದನಾ ಭಂಡಾರಿ ಸುಭಾಸ ಹೆಳವರ ನಾಯಿಕ ಹನಮಂತ ವಾಗ್ಮಾರೆ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ಕಿತ್ತೂರು ಚೆನ್ನಮ್ಮ ವಿಜಯ ಜ್ಯೋತಿ ಯಾತ್ರೆಗೆ ಸ್ವಾಗತ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ನಿಮಿತ್ತ ಕಿತ್ತೂರು ರಾಣಿ ಚೆನ್ನಮ್ಮ ವಿಜಯ ಜ್ಯೋತಿ ಯಾತ್ರೆಯು ಜಿಲ್ಲೆಗೆ ಬುಧವಾರ ರಾತ್ರಿ ಆಗಮಿಸಿತು.

ವಿಜಯಪುರಕ್ಕೆ ಆಗಮಿಸಿದ ವಿಜಯ ಜ್ಯೋತಿ ಯಾತ್ರೆಯ ರಥಕ್ಕೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಡಾ. ಆನಂದ ಕೆ ಅವರು ಪೂಜೆ ಸಲ್ಲಿಸಿ ಕಿತ್ತೂರ ರಾಣಿ ಚನ್ನಮ್ಮ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸಿದರು.

ವೀರ ರಾಣಿ ಚನ್ನಮ್ಮ ಅವರ ಧೈರ್ಯ, ಶೌರ್ಯ ಹಾಗೂ ಬ್ರಿಟಿಷರ ವಿರುದ್ಧದ ಹೋರಾಟದ ಸ್ಫೂರ್ತಿಯನ್ನು ವಿಜಯ ಜ್ಯೋತಿ ಯಾತ್ರೆಯ ಮೂಲಕ ಜನರಿಗೆ ತಿಳಿಸಿಕೊಡುವುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ ಹೇಳಿದರು.

ವಿಜಯ ಜ್ಯೋತಿ ಯಾತ್ರೆಯ ಮೆರವಣಿಗೆಯು ವಿವಿಧ ಜಾನಪದ ಕಲಾ ತಂಡಗಳಿಂದ ಜಿಲ್ಲಾಧಿಕಾರಿ ಕಚೇರಿಯಿಂದ ಆರಂಭಗೊಂಡು, ನಗರದ ವಿವಿಧ ಪ್ರಮುಖ ರಸ್ತೆಗಳಲ್ಲಿ ಸಾಗಿತು.ಬಾಗಲಕೋಟೆ ಜಿಲ್ಲೆಯಿಂದ ವಿಜಯಪುರಕ್ಕೆ ಆಗಮಿಸಿದ ವಿಜಯ ಜ್ಯೋತಿ ಯಾತ್ರೆಯು ತಿಕೋಟಾ ಮೂಲಕ ಬೆಳಗಾವಿ ಜಿಲ್ಲೆಯ ಅಥಣಿಗೆ ಬೀಳ್ಕೊಡಲಾಯಿತು. ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ನಡೆಯಲಿರುವ ಕಿತ್ತೂರು ಉತ್ಸವದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚರಿಸುತ್ತಿರುವ ಈ ಯಾತ್ರೆಗೆ ವಿಜಯಪುರ ಜಿಲ್ಲೆಯಲ್ಲಿ ಗೌರವಪೂರ್ಣ ಸ್ವಾಗತ ಹಾಗೂ ಬೀಳ್ಕೊಡುಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಬೈಲಹೊಂಗಲದ ನಗರ ಸಭೆ ಪೌರಾಯುಕ್ತರಾದ ಶ್ರೀಮತಿ ಭಾಗ್ಯಶ್ರೀ ಆರ್ ಹುಗ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ,ಕ್ರೀಡಾಧಿಕಾರಿ ರಾಜಶೇಖರ ಧೈವಾಡಿ, ಬಿ.ಎಮ್ ಪಾಟೀಲ ಎಂ. ಟಿ. ಪಾಟೀಲ, ಗುರುಶಾಂತ ನಿಡೋಣಿ, ಪ್ರೇಮಾನಂದ ಬಿರಾದಾರ, ಎಸ್ ಆರ್. ಹುಕ್ಕಣಿ, ಸುರೇಶ ಬಿರಾದಾರ, ಬಸನಗೌಡ ಪಾಟೀಲ, ಕುಮಾರಗೌಡ ಪಾಟೀಲ, ಅಡಿವೆಪ್ಪ ಸಾಲಗಲ್, ಪೀಟರ್ ಅಲೆಕ್ಸಾಂಡರ್ ಸೇ–ರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

### ಒಬ್ಬ ಶ್ರೇಷ್ಠ ಶಿಕ್ಷಕ ದೇಶದ ರಕ್ಷಕ : ಡಾ. ನಡುವಿನಮನಿ

# ಬಿ.ಎಲ್.ಡಿ.ಇ ಶಿಕ್ಷಣ ಮಹಾವಿದ್ಯಾಲಯದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಮೌಲ್ಯಯುತ ಸಂದೇಶ



ಜಮಖಂಡಿ: ಶಿಕ್ಷಕ ಸಮಾಜದ ನಿರ್ಮಾಪಕನಾಗಿದ್ದು, ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ ಹಾಗೂ ಜವಾಬ್ದಾರಿಯುತ ವೃತ್ತಿಯಾಗಿದೆ. ಒಬ್ಬ ಶ್ರೇಷ್ಠ ಶಿಕ್ಷಕ ಉತ್ತಮ ಪ್ರಜೆಗಳನ್ನು ರೂಪಿಸುವ ಮೂಲಕ ದೇಶದ ಭವಿಷ್ಯವನ್ನು ರಕ್ಷಿಸುತ್ತಾನೆ. ಶಿಕ್ಷಣವೆಂದರೆ ಕೇವಲ ಪಠ್ಯ ಬೋಧನೆಯಲ್ಲ; ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳು, ಶಿಸ್ತು, ಸಂಯಮ ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸುವುದಾಗಿದೆ ಎಂದು ಬಾಗಲಕೋಟೆ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಡಾ. ಎನ್.ಬಿ. ನಡುವಿನಮನಿ ಹೇಳಿದರು.

ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ವತಿಯಿಂದ ಆಯೋಜಿಸಿದ್ದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಎಲ್.ಡಿ.ಇ ಸಂಸ್ಥೆಯ ಸ್ನಾತಕೋತ್ತರ ವಿಭಾಗದ ನಿರ್ದೇಶಕ ಡಾ. ಬಿ.ಎಂ. ನುಚ್ಚಿ ಮಾತನಾಡಿ, ಬಿ.ಎಡ್ ಶಿಕ್ಷಣವು ಪ್ರಶಿಕ್ಷಣಾರ್ಥಿಗಳಿಗೆ ಶಿಸ್ತು, ಸಂಯಮ, ತಾಳ್ಮೆ ಹಾಗೂ ಸೇವಾ ಮನೋಭಾವವನ್ನು ಕಲಿಸುವ ಮಹತ್ವದ ಹಂತವಾಗಿದೆ. ಶಿಕ್ಷಕನಲ್ಲಿ ತಾಯಿಯಂತಹ ತ್ಯಾಗದ ಗುಣವಿರಬೇಕು. ಭಾರತೀಯ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಗೌರವಯುತ ಸ್ಥಾನವಿದ್ದು, ಶಿಕ್ಷಕರು ತಮ್ಮ ನಡೆ–ನುಡಿ ಹಾಗೂ ಆದರ್ಶಗಳ ಮೂಲಕ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಆರ್.ಎಸ್. ಕಾಗವಾಡೆ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಪ್ರಾಚಾರ್ಯ ಪ್ರೊ. ಕೆ.ಜೆ. ಜೀರಗಾಳಿ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಾಂಸ್ಕೃತಿ–ಕ ವಿಭಾಗದ ಕಾರ್ಯಾಧ್ಯಕ್ಷ ಪ್ರೊ. ಪ್ರೇಮಾನಂದ ಹಿರೇಮಠ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಮಹಾದೇವ ಗಲಬಿ ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ನಿರ್ವಹಿಸಿದರು.

ಪ್ರಶಿಕ್ಷಣಾರ್ಥಿಗಳಾದ ವಿನಯ ಕಟ್ಟಿಮನಿ ಹಾಗೂ ರೋಹಿಣಿ ಔದಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶೃತಿ ಗುಡದಿ ಪ್ರಾರ್ಥಿಸಿದರು. ಸ್ವಾತಿ ಚಿಂಚಕಂಡಿ ಪರಿಚಯಿಸಿದರು. ಶಿವಪ್ರಸಾದ ಹುಣಸಿಕಟ್ಟಿ ಹಾಗೂ ಸ್ಫೂರ್ತಿ ಗದ್ಯಾಳ ನಿರೂಪಿಸಿದರು. ಪ್ರಶಿಕ್ಷಣಾರ್ಥಿ ಪ್ರಧಾನ ಕಾರ್ಯದರ್ಶಿ ಜಯಲಕ್ಷ್ಮಿ ಅಥಣಿ ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಉಪನ್ಯಾಸಕ ವೃಂದದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತ–ರಿದ್ದರು.

## ಸಾಧಕ ವಿದ್ಯಾರ್ಥಿಗಳಿಗೆ ಗೌರವದ ಸನ್ಮಾನ

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಮತ್ತು ವಿಶ್ವವಿದ್ಯಾಲಯ ಮಟ್ಟದ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಶಸ್ತಿ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶೈಕ್ಷಣಿಕ ಸಾಧನೆ ಹಾಗೂ ಕ್ರೀಡಾ ಕ್ಷೇತ್ರದ ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಮೂಲಕ ಇತರ ವಿದ್ಯಾರ್ಥಿಗಳಿಗೂ ಸಾಧನೆಯ ಪ್ರೇರಣೆ ನೀಡಲಾಯಿತು.

# ವಿಜಯಪುರ ಜಿಲ್ಲೆ ಅಭಿವೃದ್ಧಿಗೆ 371(ಜೆ) ಸೌಲಭ್ಯ ಕಲ್ಪಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ವಿಜಯಪುರ ಜಿಲ್ಲೆಗೂ ಸಂವಿಧಾನದ 371(ಜೆ) ವಿಶೇಷ ಸೌಲಭ್ಯ ಕಲ್ಪಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಸಿಂದಗಿ ನಗರದ ಬಸವೇಶ್ವರ ವೃತ್ತದ ಬಳಿ ಕಳೆದ 13 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಅಬು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಕರ್ನಾಟಕ ಮುಸ್ಲಿಂ ಹಿತರಕ್ಷಣಾ ವೇದಿಕೆ ಬೆಂಬಲ ಸೂಚಿಸಿದರು.

ಧರಣಿ ಸ್ಥಳಕ್ಕೆ ಮಠಾಧೀಶರು, ವಿವಿಧ ಸಂಘಟನೆಗಳ ಮುಖಂಡರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭೇಟಿ ನೀಡಿ ಹೋರಾಟಗಾರರಿಗೆ ಬೆಂಬಲ ವ್ಯಕ್ತಪಡಿಸಿದರು.

ಅಬು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ಕರ್ನಾಟಕ ಮುಸ್ಲಿಂ ಹಿತರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಎಂ.ಎ. ಖತೀಬ ಮಾತನಾಡಿ, ವಿಜಯಪುರ ಜಿಲ್ಲೆಯನ್ನು 371(ಜೆ) ಸೌಲಭ್ಯದ ವ್ಯಾಪ್ತಿಗೆ ಸೇರಿಸಬೇಕೆಂಬುದು ಈ ಭಾಗದ ಜನರ ಪ್ರಮುಖ ಬೇಡಿಕೆಯಾಗಿದೆ. ಜಿಲ್ಲೆಯ ಜನಪ್ರತಿನಿಧಿಗಳು ಈ ವಿಷಯದಲ್ಲಿ ಆಸಕ್ತಿ ವಹಿಸಿ, ಅಗತ್ಯ ದಾಖಲೆಗಳೊಂದಿಗೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಯತ್ನಿಸಬೇಕು ಎಂದು ಒತ್ತಾಯಿಸಿದರು.

ಈ ಸೌಲಭ್ಯ ದೊರೆತರೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಹಿಂದುಳಿದ ಭಾಗದ ಅರ್ಹ ಯುವಜನರಿಗೆ ಅನುಕೂಲವಾಗುವ ನಿರೀಕ್ಷೆಯಿದೆ. ಜಿಲ್ಲೆಯ ಅಭಿವೃದ್ಧಿ ಹಾಗೂ ಜನರ ಭವಿಷ್ಯದ ದೃಷ್ಟಿಯಿಂದ ಈ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಹೋರಾಟದ ರೂವಾರಿ ರಂಗನಾಥ ತೋರ್ಫೆ ಮಾತನಾಡಿ, 371(ಜೆ) ಸೌಲಭ್ಯಕ್ಕಾಗಿ ನಡೆಯುತ್ತಿರುವ ಹೋರಾಟವು ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಯುವಜನರ ಭವಿಷ್ಯಕ್ಕೆ ಸಂಬಂಧಿಸಿದೆ. ಆದ್ದರಿಂದ ಎಲ್ಲ ವರ್ಗದ ಜನರು ಒಗ್ಗಟ್ಟಿನಿಂದ ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ವಕೀಲರಾದ ದಾನಪ್ಪ ಚನ್ನಗೊಂಡ, ಕರ್ನಾಟಕ ಆದಿಜಾಂಬವ ಜನಸಂಘದ ಅಧ್ಯಕ್ಷ ಸಾಯಬಣ್ಣ ದೇವರಮನಿ ಮಾತನಾಡಿ, ವಿಜಯಪುರ ಜಿಲ್ಲೆಯ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಗಮನ ಅಗತ್ಯವಿದೆ. ಜಿಲ್ಲೆಯ ಜನರ ಬೇಡಿಕೆಯನ್ನು ಸರ್ಕಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬೋರಗಿ ಪುರದಾಳ ವಿಶ್ವಾರಾಧ್ಯಮಠದ ಮಹಾಲಿಂಗೇಶ್ವರ ಸ್ವಾಮಿಗಳು ಹಾಗೂ ಹಿಕ್ಕನಗುತ್ತಿ ಮಹಾಮಠದ ಪ್ರಭುಲಿಂಗ ಶರಣರು ಅವರು ಈ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾರ್ಗದರ್ಶನ ನೀಡಿದರು.

ಸಂಗಣ್ಣ ಬ್ಯಾಕೋಡ, ಪತ್ರಕರ್ತರಾದ ಪಂಡಿತ ಯಂಪೂರೆ, ಅಂಬರೀಶ ಚೌಗಲೆ, ಅಬುಬಕರ ಖತೀಬ, ಸಿದ್ದಲಿಂಗಯ್ಯ ಹಿರೇಮಠ, ವಿಶ್ವನಾಥ ಕಂಬಾರ, ಸಿದ್ದು ಕಡಗಂಚಿ, ಗುರುರಾಜ ಪಡಶೆಟ್ಟಿ, ಮಲ್ಲು ಅಲ್ಲಾಪುರ, ಶಂಕರ ಮಲ್ಲೇದ ಸರ್, ವಿಜಯಪುರದ ಸಾರವಾಡ ಶಿಕ್ಷಕರು ಸೇರಿದಂತೆ ಐಟಿಐ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಅ.22ರಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಶಸ್ತಿ ಪ್ರದಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬೆಂಗಳೂರಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ 2026ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಹಾಗೂ 2025ನೇ ಸಾಲಿನ ಪುಸ್ತಕ ಬಹುಮಾನ ವಿತರಣಾ ಸಮಾರಂಭವನ್ನು ಅ.22ರಂದು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ ಎಂದು ಪ್ರಾಧಿಕಾರದ ಸದಸ್ಯ ಸಂಚಾಲಕ ಎಸ್. ಗಂಗಾಧರಯ್ಯ ಅವರು ತಿಳಿಸಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾಧಿಕಾರವು ಪ್ರತಿವರ್ಷ ಅನುವಾದ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿದ ಸಾಹಿತಿಗಳು ಹಾಗೂ ಅನುವಾದಕರನ್ನು ಗುರುತಿಸಿ ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನಗಳನ್ನು ನೀಡುತ್ತಾ ಬಂದಿದೆ. ಅದರಂತೆ ಈ ಬಾರಿಯೂ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

2026ನೇ ಸಾಲಿನ ಗೌರವ ಪ್ರಶಸ್ತಿಗೆ ಡಾ. ಸೂರ್ಯಕಾಂತ್ ಎಸ್. ಸೂಜ್ಯಾತ್, ಡಾ. ಮಲರ್ ವಿಳಿ ಕೆ., ಡಾ. ಬಂಜಗೆರೆ ಜಯಪ್ರಕಾಶ, ಪ್ರೊ. ಸಿ. ನಾಗಣ್ಣ ಹಾಗೂ ಡಾ. ಕೇಶವ ಶರ್ಮ ಕೆ. ಅವರು ಆಯ್ಕೆಯಾಗಿದ್ದಾರೆ.

2025ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಡಾ. ಕೆ. ಶ್ರೀನಾಥ, ಡಾ. ಪ್ರಮೋದ್ ಮುತಾಲಿಕ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಕನಕರಾಜ ಆರನಕಟ್ಟೆ, ಅಶೋಕ ಕುಮಾರ ಎಂ. ಹಾಗೂ ಚಂದ್ರಶೇಖರ ಮದಭಾವಿ ಅವರು ಆಯ್ಕೆಯಾಗಿದ್ದು, ಎಂದು ತಿಳಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅನುವಾದ ಸಾಹಿತ್ಯದ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡುತ್ತಿದೆ. ಪ್ರತಿವರ್ಷ ಹೊಸ ಅನುವಾದಕರಿಗೆ ಅವಕಾಶ ಕಲ್ಪಿಸುವ ಮೂಲಕ ವಿವಿಧ ಭಾಷೆಗಳಲ್ಲಿನ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಲು ಪ್ರೋತ್ಸಾಹಿಸಲಾಗುತ್ತಿದೆ. ಮೌಲ್ಯಯುತ ಬರಹಗಳನ್ನು ರಚಿಸುವ ಹಿರಿಯ ಮತ್ತು ಕಿರಿಯ ಸಾಹಿತಿಗಳನ್ನು ಗುರುತಿಸಿ ಅವರನ್ನು, ಪ್ರೋತ್ಸಾಹಿಸುವ ಉದ್ದೇಶದಿಂದ ನಗದು ಬಹುಮಾನವನ್ನು ನೀಡಲಾಗುತ್ತಿದೆ ಎಂದು ವಿವರಿಸಿದರು.

ಅಂದು ಅ.22 ರಂದು ಸಮಾರಂಭವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಅವರು ಉದ್ಘಾಟಿಸಲಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ. ಪಾಟೀಲ ಅವರು ಗೌರವ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಿಸಲಿದ್ದಾರೆ. ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ರಿಜಿಸ್ಟ್ರಾರ್ ದತ್ತಪ್ಪ ಸಾಗನೂರ, ಉಪಸ್ಥಿತ–ರಿದ್ದರು.

# ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯ ಕ್ರಮ ವಹಿಸಿ : ಮಾಶ್ಯಾಳ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ರಾವುತರಾಯ ಮಲ್ಲಯ್ಯ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪಟ್ಟಣದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯ ಕ್ರಮ ವಹಿಸುವಂತೆ ಆರೋಗ್ಯ ಇಲಾಖೆಯ ಹಿರಿಯ ನಿರೀಕ್ಷಣಾಧಿಕಾರಿ ಎಂ.ಆರ್.ಮಾಶ್ಯಾಳ ಪಟ್ಟಣ ಪಂಚಾಯಿತಿ ಸಿಬ್ಬಂದಿ ಸೋಮಶೇಖರ ಭೋವಿ ಅವರಿಗೆ ಸೂಚನೆ ನೀಡಿದರು.

ಪಟ್ಟಣದಲ್ಲಿ ಇದೇ ದಿ: 22 ರಿಂದ 27 ರವರೆಗೆ ಜಾತ್ರೆ ಜರುಗುತ್ತಿರುವುದರಿಂದ ಬೇರೆ ಬೇರೆ ಜಿಲ್ಲೆ, ರಾಜ್ಯಗಳಿಂದ ಜನರು ಆಗಮಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಎಲ್ಲರಿಗೂ ಶುದ್ಧ ಕುಡಿಯುವ ನೀರು ಪೂರೈಕೆ, ಹಾಗೂ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ನೀರು ನಿಂತು ಗಲೀಜು ಆಗದಂತೆ ಕ್ರಮ ವಹಿಸುವುದು. ಪಟ್ಟಣದ ಚರಂಡಿಗಳನ್ನು ಸ್ವಚ್ಛಗೊಳಿಸಿ ಕ್ರಿಮಿನಾಶಕ ಪೌಡರ್ ಸಿಂಪರಣೆ ಹಾಗೂ ಕುಡಿಯುವ ನೀರಿನ ಮೂಲಗಳನ್ನು ಕ್ಲೋರಿನೇಶನ್ ಮಾಡುವುದು ಮತ್ತು ಅವುಗಳ ಸುತ್ತಮುತ್ತ ದನಕರು, ವಾಹನ ತೊಳೆಯದಂತೆ ಕ್ರಮ ಕೈಗೊಳ್ಳುವುದು. ಮುಖ್ಯವಾಗಿ ಬಯಲು ಮಲ ವಿಸರ್ಜನೆ ನಿಷೇಧಿಸುವುದು. ಜೊತೆಗೆ ಕಲುಷಿತ ನೀರು ಮತ್ತು ಕರಿದ ಆಹಾರ ಪದಾರ್ಥಗಳಿಂದ ಬರುವ ರೋಗ ರುಜಿನಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಅವುಗಳು ಬರದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸಿದರು.

ಆರೋಗ್ಯ ಇಲಾಖೆಯ ನಿರೀಕ್ಷಣಾಧಿಕಾರಿ ಲಕ್ಷೀಕಾಂತ ಲಾಲಿ, ಪಂಚಾಯಿತಿ ಸಿಬ್ಬಂದಿ ಬಸವರಾಜ ನಾಟೀಕಾರ ಇದ್ದರು.



**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR